# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 96 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.10.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 96 • PRGI No:KARKAN/2023/88055 • VIJAYANAGARA • 10.10.2024 • Thursday • Page:04 • Rs:2



HAMPI TIMES
No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?

ಹಂಪಿ ಟೈಮ್ಸ್ ಇ-ಪೇಪರ್

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಚಿಕ್ಕ ಮೊತ್ತ ದೊಡ್ಡ ಜಾಹೀರಾತು

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
90 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


# ಕಂಪ್ಲಿ ಕ್ಷೇತ್ರ ಅಭಿವೃದ್ಧಿಗೆ 100 ಕೋಟಿ ರೂ. ಸರ್ವರಿಗೂ ಸೂರು ಹೆಚ್ಚುವರಿ 10 ಸಾವಿರ ಮನೆ

## ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ | 1620 ಕೋಟಿ ರೂ. ಶಿಕ್ಷಣಕ್ಕೆ ವೆಚ್ಚ


■ ಹಂಪಿ ಟೈಮ್ಸ್ ಬಳ್ಳಾರಿ

ಬರುವ ಫೆಬ್ರವರಿ ತಿಂಗಳಲ್ಲಿ ವಸತಿ ಇಲಾಖೆಯಿಂದ ಕಂಪ್ಲಿ ವಿಧಾನಸಭಾ ಕ್ಷೇತ್ರ ಭಾಗಕ್ಕೆ ಹೆಚ್ಚುವರಿಯಾಗಿ 10 ಸಾವಿರ ಮನೆಗಳನ್ನು ನೀಡಲಾಗುವುದು ಎಂದು ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ಕಂಪ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ 100 ಕೋಟಿ ರೂ. ಅನುದಾನ ಮಂಜೂರು ಮಾಡಿ, ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿದ ಸಲುವಾಗಿ ಕಂಪ್ಲಿ ಪಟ್ಟಣದ ಎಸ್.ಎನ್.ಪೇಟೆ ಶಾಲಾ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ, ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ನಮ್ಮ ಸರ್ಕಾರವು ಸರ್ವರಿಗೂ ಸೂರು ಸಿಗಲಿ ಎಂಬ ಉದ್ದೇಶ ಹೊಂದಿದೆ. ಈ ಹಿಂದೆ ವಿವಿಧ ಕಾರಣಗಳಿಂದಾಗಿ ನೆನೆಗುದಿಗೆ ಬಿದ್ದಿದ್ದ ಮನೆಗಳನ್ನು ಪೂರ್ಣಗೊಳಿಸಬೇಕು ಎಂದು ಮುಖ್ಯಮಂತ್ರಿಗಳ ನಿರ್ದೇಶನವಿದ್ದು, ಫೆಬ್ರವರಿ ತಿಂಗಳಲ್ಲಿ ಹಂತ ಹಂತವಾಗಿ ಮನೆ ವಿತರಿಸಲಾಗುವುದು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಇಲಾಖೆಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಅನುದಾನದ ಕೊರತೆ ಇಲ್ಲ. ಅದೇರೀತಿಯಾಗಿ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಯಶಸ್ವಿಯಾಗಿ ಅನುಷ್ಠಾನಗೊಳಿಸಿ ನುಡಿದಂತೆ ನಡೆದಿದೆ. ಬಡಜನರ



ಕಲ್ಯಾಣಕ್ಕಾಗಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದರು. ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಈ ಬಾರಿಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಸಮುದಾಯಕ್ಕೆ 3200 ಕೋಟಿ ರೂ. ನೀಡಲಾಗಿದೆ. ಈ ಪೈಕಿ 1620 ಕೋಟಿ ರೂ. ಶಿಕ್ಷಣಕ್ಕೆ ವೆಚ್ಚ ಮಾಡಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಕಂಪ್ಲಿ ಕ್ಷೇತ್ರದ ಅಭಿವೃದ್ಧಿಗೆ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಡಿ ಅನುದಾನ ಹಂಚಿಕೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತ ಸಮಗ್ರ ಚಿತ್ರಣ ವಿವರಿಸಿದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಮಾತನಾಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಕೊರತೆಯಿದೆ ಎಂದು ಸುಳ್ಳು ಹೇಳುತ್ತಿದ್ದರು. ಆದರೆ ಈ ಭಾಗದ ಕಂಪ್ಲಿ ಶಾಸಕರ ಇಚ್ಛಾಶಕ್ತಿಯಿಂದ ಕ್ಷೇತ್ರದ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಪಡೆದಿರುವ ಅನುದಾನವೇ ನಿದರ್ಶನವಾಗಿದೆ ಎಂದು ಸ್ಪಷ್ಟಪಡಿಸಿದರು.

ಶಾಸಕ ಗಣೇಶ್ ಈ ಭಾಗದ ಜನರ, ರೈತರ ಪರ ಕಾಳಜಿ ಹೊಂದಿದವರು; ಹಾಗಾಗಿ ಅವರನ್ನು ಈ ಭಾಗದ ಭಗೀರಥ ಎಂದೇ ಕರೆಯುತ್ತಾರೆ ಎಂದು ಶಾಸಕ ಭರತ್ ರೆಡ್ಡಿ ವರ್ಣಿಸಿದರು. ವಿವಿಧ ಯೋಜನೆಗಳಡಿ ಆಯ್ಕೆಯಾದ ಸ್ವ ಸಹಾಯ ಸಂಘದ ಮಹಿಳೆಯರಿಗೆ ಆದೇಶ ಪತ್ರ, ಚೆಕ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಅನ್ವರ್ ಭಾಷಾ, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಹುಮಾಯೂನ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಹಾಯಕ ಆಯುಕ್ತ ಪ್ರಮೋದ್, ತಹಶೀಲ್ದಾರ ಶಿವರಾಜ, ಕಂಪ್ಲಿ ಮತ್ತು ಕುರುಗೋಡು ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಹಲವು ವರ್ಷಗಳಿಂದ ಕಂಪ್ಲಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ದೊರೆಯುತ್ತಿರಲಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಆಶಾಭಾವನೆಯಿಂದ ನನ್ನ ಕ್ಷೇತ್ರದ ಅಭಿವೃದ್ಧಿಗೆ 100 ರೂ. ಕೋಟಿ ನೀಡಿದ್ದಾರೆ. ಜನಪರ ಕಲ್ಯಾಣ ಯೋಜನೆಗಳನ್ನು ಕೈಗೊಂಡು, ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಋಣ ತೀರಿಸುವ ಕೆಲಸ ಮಾಡುತ್ತೇನೆ.

– ಜೆ.ಎನ್.ಗಣೇಶ್, ಶಾಸಕ,
ಅಧ್ಯಕ್ಷರು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ

## ಮೈಕ್ರೋ ನ್ಯೂಸ್

### ವಿಕಲಚೇತನರ ಆರೈಕೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಶೇ.75 ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವ್ಯಕ್ತಿಗಳ ಆರೈಕೆ ದಾರರಿಗೆ ಮಾಹೆಯಾನ 1000 ರೂಗಳ ಪ್ರೋತ್ಸಾಹಧನ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಆಕ್ಟೋಬರ್ 30 ಕೊನೆದಿನಾಂಕ ಆಗಿರುತ್ತದೆ.

ಅಥವಾ ಸಮೀಪದ ಗ್ರಾಮ ಪಂಚಾಯತಿ ವಿ.ಆರ್.ಡಬ್ಲ್ಯು, ನಗರ ಸಭೆ ಯು.ಆರ್.ಡಬ್ಲ್ಯು ಹಾಗೂ ತಾಲ್ಲೂಕು ಪಂಚಾಯತಿಯ ಎಮ್.ಆರ್.ಡಬ್ಲ್ಯು ನಿಗಧಿತ ನಮೂನೆಯ ಅರ್ಜಿ ಪಡೆದು ಭರ್ತಿಮಾಡಿದ ನಮೂನೆಯ ಅರ್ಜಿಯನ್ನು ಅವಶ್ಯಕ ದಾಖಲಾತಿಗಳೊಂದಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು.

ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 994525991, ಹರಪನಹಳ್ಳಿ ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 9901182525 ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 9741185924, ಕೂಡ್ಲಿಗಿ ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 8217626361 ಹಡಗಲಿ ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 9900890403 ಮತ್ತು ಕೊಟ್ಟೂರು ತಾಲ್ಲೂಕಿನ ಎಮ್.ಆರ್.ಡಬ್ಲ್ಯು ಮೊ.ಸಂ: 8296859012 ಇವರನ್ನು ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಾರ್ಯಾಲಯಕ್ಕೆ ಸಂಪರ್ಕಿಸಿ.

### ಅಕೌಂಟೆಂಟ್ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಆರೋಗ್ಯ ಇಲಾಖೆಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನ ಎನ್‌ಟಿಇಪಿ ಕಾರ್ಯಕ್ರಮದ ಅಡಿಯಲ್ಲಿ ಮಂಜೂರಾಗಿದ್ದ ಅಕೌಂಟೆಂಟ್ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕೃತ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಕ್ಷಯರೋಗ ನಿರ್ಮೂಲಣಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಕ್ಟೋಬರ್ 16ರ ಸಂಜೆ 5 ಗಂಟೆಯೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದು.

# ಹಾಲುಮತ ಜಾತಿಯಲ್ಲ ಅದೊಂದು ಸಮುದಾಯ

## ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ನಿಂಗರಾಜ ಉಳ್ಳಾಗಡ್ಡಿ ಹೇಳಿಕೆ




■ ಹಂಪಿ ಟೈಮ್ಸ್ ಹೊಸಪೇಟೆ

ಹಾಲುಮತ ಬರೀ ಜಾತಿಯಲ್ಲ ಅದೊಂದು ಸಮುದಾಯ, ವಿಶಿಷ್ಟ ಸಂಸ್ಕೃತಿ, ವೈವಿಧ್ಯಮಯ ಆಚರಣೆ, ಸಂಪ್ರದಾಯಗಳನ್ನು ಹೊಂದಿರುವ ನಾಡಿನ ಸಂಸ್ಕೃತಿಕ ಪ್ರತೀಕವಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿ ನಿಂಗರಾಜ ಉಳ್ಳಾಗಡ್ಡಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠ ವತಿಯಿಂದ ಹಾಲುಮತ 9ನೇ ಉಪನ್ಯಾಸ ಮಾಲೆಯ ಹಾಲುಮತ ಸಾಂಸ್ಕೃತಿಕ ಪದಕೋಶ : ಸ್ವರೂಪ ಮತ್ತು ಆಶಯ ಎಂಬ ಉಪನ್ಯಾಸದಲ್ಲಿ ಮಂಗಳವಾರ ಮಾತನಾಡಿದರು. ಹಾಲುಮತ ಸಮುದಾಯದವರು ಸದಾ ನಿಸರ್ಗದಲ್ಲಿದ್ದು, ಸಾಹಿತ್ಯ, ಸಂಸ್ಕೃತಿ, ಕಲೆ ಹಾಗೂ ಹಬ್ಬ ಆಚರಣೆಗಳಿಗೆ ತಮ್ಮದೇ ಕೊಡುಗೆ ನೀಡಿದ್ದು, ಇದು ಸಾಮಾಜಿಕ ಪ್ರಜ್ಞೆಗೆ ನಿದರ್ಶನಗಳಲ್ಲಿ ಒಂದು ಎನ್ನುವಂತೆ ಬೆಳೆದು ಬಂದಿದೆ ಎಂದು ತಿಳಿಸಿದರು.

ಇನ್ನೂ ಹಾಲುಮತ ಅಧ್ಯಯನ ಪೀಠದ ಸಂಚಾಲಕ ಡಾ. ಎಫ್.ಟಿ. ಹಳ್ಳಿಕೇರಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಕುರುಬ ಸಮುದಾಯ ಪದಕೋಶವನ್ನು ರಚಿಸುವ ಅವಶ್ಯಕತೆ ಇದ್ದು, ಸಮುದಾಯದ ಚರಿತ್ರೆ ನಿರ್ಮಾಣ ಆಗಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ಅನೇಕ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ತ್ಯಾಜ್ಯ ನಿರ್ವಹಣೆಯಲ್ಲಿ ಸಂಸ್ಥೆಗಳು ಜವಾಬ್ದಾರಿಯಿಂದ ಕ್ರಮವಹಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ




■ ಹಂಪಿ ಟೈಮ್ಸ್ ಹೊಸಪೇಟೆ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ವತಿಯಿಂದ ತ್ಯಾಜ್ಯ ನಿರ್ವಹಣಾ ನಿಯಮಗಳು ಹಾಗೂ ಇಪಿಆರ್ ಮತ್ತು ಸಮುದಾಯ ಭಾಗವಹಿಸುವಿಕೆ ಮಹತ್ವದ ಬಗ್ಗೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಗಾರ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಣದಲ್ಲಿ ನಡೆಯಿತು.

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಕಾರ್ಯಗಾರ ಉದ್ಘಾಟಿಸಿ ಮಾತನಾಡಿ, ಪ್ಲಾಸ್ಟಿಕ್ ತ್ಯಾಜ್ಯ, ಜೈವಿಕ ವೈದ್ಯಕೀಯ ತ್ಯಾಜ್ಯ ಸೇರಿದಂತೆ ವಿವಿಧ ಪ್ರಮುಖವಾಗಿರುತ್ತದೆ. ಇದೊಂದು ಅತ್ಯಗತ್ಯ ತರಬೇತಿಯಾಗಿದ್ದು, ಅಧಿಕಾರಿಗಳು ತರಬೇತಿಯ ಪ್ರಯೋಜನ ಪಡೆದು ತಮ್ಮ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯ ಅನುಷ್ಠಾನಗೊಳಿಸಲು ಸೂಕ್ತ ಕ್ರಮವಹಿಸಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಭಾಗವಹಿಸಿ ಸುಮಾರು 70 ನಗರ, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ತ್ಯಾಜ್ಯ ನಿರ್ವಹಣಾ ನಿಯಮಗಳು ಹಾಗೂ ಇಪಿಆರ್ ಮತ್ತು ಸಮುದಾಯ ಭಾಗವಹಿಸುವಿಕೆ ಮಹತ್ವ ವಿವರಿಸಿದರು.

ಕಾರ್ಯಗಾರದಲ್ಲಿ ಪೌರಾಡಳಿತ ನಿರ್ದೇಶನಾಲಯದ ಅಧಿಕಾರಿಗಳಾದ ಮನೋಹರ ಹಾಗೂ ಸಿಬ್ಬಂದಿ ಮತ್ತು ವಿವಿಧ ನಗರ, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇವೆ ಮತ್ತಷ್ಟು ವಿಸ್ತಾರವಾಗಲಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಉದ್ಘಾಟನೆ | ಡ್ಯಾಂ ರೋಡ್ ಶಾಖೆ ಹೊಸ ಕಟ್ಟಡಕ್ಕೆ ಸ್ಥಳಾಂತರ

■ ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ಗ್ರಾಮೀಣ ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆಯ ಜೊತೆಗೆ ಮೌಲ್ಯಯುತ ವಸ್ತುಗಳ ಸುರಕ್ಷತೆಗೆ ಆದ್ಯತೆ ನೀಡಿರುವುದು ಉತ್ತಮ ಕಾರ್ಯ. ಗ್ರಾಮೀಣ ಜನತೆಗೆ ಮತ್ತಷ್ಟು ಸೇವೆ ಲಭಿಸುವಂತಾಗಲಿ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಡ್ಯಾಂ ರೋಡ್ ಶಾಖೆಯನ್ನು ಅದೇ ಡ್ಯಾಂ ರಸ್ತೆಯ ಕೆ.ಇ.ಬಿ ಎದುರುಗಡೆ ಇರುವ ಯುನಿಯನ್ ಬ್ಯಾಂಕ್ ಪಕ್ಕದ ಕಟ್ಟಡಕ್ಕೆ ಸ್ಥಳಾಂತರಗೊಳಿಸಿದ ಶಾಖೆಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು. ಬ್ಯಾಂಕಿನ ವಹಿವಾಟು ಮತ್ತು ಸೇವೆಗಳ ಕುರಿತು ಬ್ಯಾಂಕ್ ಅಧಿಕಾರಿಗಳಿಂದ ಮಾಹಿತಿ ಪಡೆದರು.



ಶಾಖಾ ವ್ಯವಸ್ಥಾಪಕ ಸೇತು ಮಾಧವರಾವ್ ಮಾತನಾಡಿ, 1976 ರಲ್ಲಿ ದಕ್ಷಿಣ ಭಾರತದಲ್ಲಿ ಪ್ರಾರಂಭವಾದ ಏಕೈಕ ಗ್ರಾಮೀಣ ಬ್ಯಾಂಕ್ ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಅದರ ಶಾಖೆಯನ್ನು ಹೊಸಪೇಟೆಯಲ್ಲಿ 1980 ರ ದಶಕದಲ್ಲಿ ತೆರೆಯಲಾಯಿತು. ಇಲ್ಲಿನ ಪ್ರಮುಖ ಉದ್ದಿಮೆದಾರರು, ನಗರದ ಪ್ರತಿಷ್ಠಿತ ಸಜ್ಜನರು, ಉದ್ಯೋಗಿಗಳು, ಗ್ರಾಹಕರು, ಈ ಬ್ಯಾಂಕಿನ ಶಾಖೆಯನ್ನು ತಮ್ಮದೇ ಶಾಖೆಯೆಂಬಂತೆ ಪೋಷಿಸುತ್ತಾ ಬಂದಿದ್ದಾರೆ. ಸಾವಿರ, ಸಾವಿರ ಗ್ರಾಹಕರು ಈ ಶಾಖೆಯ ಉನ್ನತಿಯಲ್ಲಿ ಸಹಕರಿಸಿದ್ದಾರೆ. ಇಂದು ಈ ಶಾಖೆಯ ಒಟ್ಟು ವ್ಯವಹಾರವು ರೂ.186 ಕೋಟಿಗಳಿಷ್ಟಾಗಿದೆ. ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದ ಪ್ರಮುಖ ಗ್ರಾಮೀಣ ಬ್ಯಾಂಕುಗಳಲ್ಲಿ ಒಂದಾಗಿದೆ. ಇಂದು ನಮ್ಮ ಬ್ಯಾಂಕಿನ ಒಟ್ಟು ವ್ಯವಹಾರವು ರೂ.62000 ಕೋಟಿಗೂ ಹೆಚ್ಚಿದೆ ಮತ್ತು 1122 ಶಾಖೆಗಳನ್ನು ಹೊಂದಿ, 22 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ನಿಷ್ಠಾವಂತ ಮತ್ತು ಸಂತುಷ್ಟ ಗ್ರಾಹಕರಿಂದಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಉತ್ತುಂಗಕ್ಕೇರಿದೆ ಮತ್ತು ಉತ್ತಮ ಸೇವೆ ಸಲ್ಲಿಸಲು ಬದ್ಧರಾಗಿದ್ದೇವೆ ಎಂದರು.

ವಿಜಯನಗರ ಜಿಲ್ಲೆ ಪ್ರಾದೇಶಿಕ ವ್ಯವಸ್ಥಾಪಕ ನೀರಜ್ ಕುಮಾರ್, ಹಿರಿಯ ವ್ಯವಸ್ಥಾಪಕರಾದ ವಾದಿರಾಜ್ ಆಚಾರ್, ಜಗದೀಶ್, ಸಿಬ್ಬಂದಿ ವರ್ಗ ಇದ್ದರು.


14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಅ.10ಕ್ಕೆ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಜಾಗೃತಿ ಜಾಥಾ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಾನಸಿಕ ಆರೋಗ್ಯ ಕಾರ್ಯಕ್ರಮ, ತಾಲೂಕು ಕಾನೂನು ಸೇವಾ ಸಮಿತಿ ಹೊಸಪೇಟೆ, ವಕೀಲರ ಸಂಘ ಹೊಸಪೇಟೆ, ಜಿ.ಎಂ.ಎ.ಇ ಸಂಸ್ಥೆಯ ಕಾಲೇಜ್ ಮತ್ತು ಸ್ಕೂಲ್ ಆಫ್ ನರ್ಸಿಂಗ್ ಸಂಕ್ಲಾಪುರ–ಹೊಸಪೇಟೆ, ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಅ.10ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಶಂಕರ್ ನಾಯ್ಕ ಎಲ್.ಆರ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ್ ಆರ್.ಹೆಚ್., ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ್ .ಜಿ, ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರಾ ಜಿ, ಜಿಲ್ಲಾ ಆರ್. ಸಿ ಹೆಚ್ ಅಧಿಕಾರಿ ಡಾ. ಜಂಬಯ್ಯ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಜಗದೀಶ ಪಾಟ್ಟೆ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಷಣ್ಮುಖ ನಾಯ್ಕ್, ಹೊಸಪೇಟೆ ತಾಲೂಕು ಆರೋಗ್ಯಾಧಿಕಾರಿ ಡಾ. ಭಾಸ್ಕರ್ ಡಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಫಿಜಿಷಿಯನ್ ಡಾ. ಸೋಮಶೇಖರ್, ಸಂಕ್ಲಾಪುರದ ಟಿ. ಎಂ.ಎ.ಇ ಸಂಸ್ಥೆಯ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರು ಸೋಮಶೇಖರ್ ಎನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊಡ್ಡಮನಿ ಎಂ.ಪಿ ಮತ್ತು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ ಸಮಾಜ ಕಾರ್ಯಕರ್ತ ಮಾರೇಶ್ ಜಿ ಇವರು ಉಪಸ್ಥಿತರಿರುವರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳಾದ ಡಾ. ರಾಧಿಕಾ ಕೆ ಅವರು ಪ್ರಾಸ್ತವಿಕ ಮಾತನಾಡುವರು ಎಂದು ಪ್ರಕಟಣೆ ತಿಳಿಸಿದೆ.

# ಉದ್ಯಮಶೀಲತಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಕರ್ನಾಟಕ ಸರ್ಕಾರ ಇವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ವಿಜಯನಗರ ಇವರು ಸ್ವಯಂ ಉದ್ಯೋಗ ಪ್ರಾರಂಭಿಸುವ ಪರಿಶಿಷ್ಟ ಪಂಗಡದವರಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ನೀಡಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗದ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ ಹಾಗೂ ಉದ್ಯಮ ನಿರ್ವಹಣೆ, ಉದ್ಯಮಶೀಲತೆ, ಉದ್ಯಮ ಪ್ರಾರಂಭದ ಹಂತಗಳು, ಉದ್ಯಮಗಳನ್ನು ಪ್ರಾರಂಭಿಸಲು ಸರ್ಕಾರದ ಯೋಜನೆಗಳು, ಸಾಲ ಸೌಲಭ್ಯಗಳು, ಬ್ಯಾಂಕ್ ಬಗ್ಗೆ, ಜಾಹಿರಾತು ಮತ್ತು ಮಾರುಕಟ್ಟೆಯ ಕುರಿತು ನೋಂದಣೆ ಮಾಡುವ ವಿಧಾನಗಳು, ಯಶಸ್ವಿ ಉದ್ಯಮಿಗಳ ಜೊತೆ ಸಂವಾದ, ಉದ್ಯಮ ನಿರ್ವಹಣೆ ಮಾಡುವ ವಿಧಾನಗಳು ಮತ್ತು ಇತ್ಯಾದಿ ವಿಷಯಗಳ ಕುರಿತು ತರಬೇತಿ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು ಹಾಗೂ ವಿದ್ಯಾಭ್ಯಾಸವು ಎಸ್.ಎಸ್.ಎಲ್.ಸಿ ಆಗಿರಬೇಕು. ಪರಿಶಿಷ್ಟ ಪಂಗಡದ ಪುರುಷ ಮತ್ತು ಮಹಿಳೆಗೆ ಮಾತ್ರ ಅವಕಾಶವಿದ್ದು, ಅಕ್ಟೋಬರ್ 16ರೊಳಗಾಗಿ ಕರೆ ಮಾಡುವುದರ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 6362681190, ಈ ನಂಬರಿಗೆ ಸಂಪರ್ಕಿಸಬಹುದು ಎಂದು ಸಿಡಾಕ್‌ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಅಮೀರ್‌ಬಾಯಿ ಕರ್ನಾಟಕಿ ಮತ್ತು ಗಾಂಧಿ

1930–40ರ ದಶಕಗಳ ಬಹುತೇಕ ನಾಟಕ ಮತ್ತು ಸಿನಿಮಾಗಳಲ್ಲಿ ರಾಜಕೀಯ ಸ್ವಾತಂತ್ರ್ಯದ ತುಡಿತಗಳು ಬೇರೆಬೇರೆ ರೂಪದಲ್ಲಿ ವ್ಯಕ್ತವಾಗುತ್ತಿದ್ದವು. ಈ ಅವಧಿಯಲ್ಲಿ ಮುಂಬೈ ಕರ್ನಾಟಕದ ರಂಗಭೂಮಿಯ ಬಹುತೇಕ ನಾಟಕಗಳು, ಬ್ರಿಟಿಶ್ ವಿರೋಧಿ ಆಯಾಮ ಒಳಗೊಂಡಿದ್ದವು. 'ನರಗುಂದ ಮುತ್ತಿಗೆ' 'ಎಚ್ಚಮನಾಯಕ' 'ಕಿತ್ತೂರು ಚನ್ನಮ್ಮ' 'ಟಿಪ್ಪುಸುಲ್ತಾನ್' 'ಸಂಗೊಳ್ಳಿ ರಾಯಣ್ಣ'–ಇವು ಬ್ರಿಟಿಶ್ ಸಾಮ್ರಾಜ್ಯದ ವಿರುದ್ಧ ಬಂಡೆದ್ದ ನಾಯಕರ ಮೇಲಿನ ಜನಪ್ರಿಯ ನಾಟಕಗಳು. ನಾಟಕ ಚಾರಿತ್ರಿಕವಿರಲಿ ಪೌರಾಣಿಕವಿರಲು, ಬ್ರಿಟಿಶರು ಭಾರತವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಂಡಿರುವುದು ತಪ್ಪೆಂಬ ಧ್ವನಿಯನ್ನು ನಾಟಕಕಾರರು ಅಡಗಿಸಿರುತ್ತಿದ್ದರು.

ಬ್ರಿಟಿಶರು ಚಾರಿತ್ರಿಕ ನಾಟಕಗಳ ಪ್ರದರ್ಶನಕ್ಕೆ ನಿಷೇಧ ಹೇರಿದ ಮೇಲೆ, ವೃತ್ತಿರಂಗಭೂಮಿಯು ಪೌರಾಣಿಕ ನಾಟಕಗಳನ್ನು ರಾಜಕೀಯ ಸಂದೇಶಕ್ಕಾಗಿ ಬಳಸತೊಡಗಿತು. ಆ ಹೊತ್ತಿನ ನಾಟಕಗಳು ಬ್ರಿಟಿಶ್ ವಿರೋಧಿ ದನಿಯನ್ನು ಒಳಗೊಂಡಿದ್ದ ರೀತಿಗೆ ಕಂದಗಲ್ಲರ 'ಅಕ್ಷಯಾಂಬರ' ನಾಟಕ ಒಳ್ಳೆಯ ನಿದರ್ಶನ. ಅದರಲ್ಲಿ ಕೃಷ್ಣನು ಬೆರಳಿಗೆ ಗಾಯ ಮಾಡಿಕೊಂಡಾಗ, ದ್ರೌಪದಿಯು ಖಾದಿಸೀರೆಯ ಸೆರಗನ್ನು ಹರಿದು ಕಟ್ಟುವ ಸನ್ನಿವೇಶವಿದೆ. ಆಗ ಕೃಷ್ಣ ಆಡುವ ಮಾತುಹೀಗಿದೆ:

"ಪ್ರಿಯ ಭಗಿನಿ! ಸುದರ್ಶನ ಚಕ್ರದ ಪವಿತ್ರತೆಗೆ ಸಮಾನವಾದ ರಾಟಿಯನ್ನು ಯಾವ ಆರ್ಯ ಕುಮಾರಿಯು ಸದಾ ತನ್ನ ಮನೆಯಲ್ಲಿ ತಿರುಗಿಸುವಳೊ, ಆ ಆರ್ಯಕುಮಾರಿಗೆ ತನ್ನ ವಸ್ತ್ರಾದಿಗಳ ಕೊರತೆಯಾಗದಂತೆ ಈ ಕೃಷ್ಣನು ಕಾಯುವನೆಂದು ಈ ಭರತಭೂಮಿಯ ಸಾಕ್ಷಿಯಾಗಿ ಸಾರಿಸಾರಿ ಹೇಳುವೆ."

ನಾಟಕದಲ್ಲಿ ಕೃಷ್ಣನಿಗೆ ಹಸ್ತಿನಾವತಿಯ ನೇಕಾರರು ಸೇರಿ, ಗಾಂಧಾರ ದೇಶದಿಂದ ಬಂದಿರುವ ಶಕುನಿ ಅಲ್ಲಿನ ಬಟ್ಟೆ ತಂದು ಮಾರುತ್ತ ನಮ್ಮ ಹೊಟ್ಟೆಯ ಮೇಲೆ ಹೊಡೆದಿದ್ದಾನೆ ಎಂದು ದೂರು ನೀಡುವ ಪ್ರಸಂಗವೂ ಇದೆ. ಪ್ರೇಕ್ಷಕರು ಇಂತಹ ಧ್ವನಿಪೂರ್ಣ ಮಾತು ಬಂದೊಡನೆ ಎದ್ದು ನಿಂತು, ಭಾರತಮಾತೆಗೆ ಜಯವಾಗಲಿ ಎಂದು ಘೋಷಿಸುತ್ತಿದ್ದರು. 'ಕಿಸ್ಮತ್' ಚಿತ್ರದಲ್ಲಿ ಅಮೀರ್‌ಬಾಯಿ ಹಾಡಿದ 'ದೂರ್‌ಹಟೊ' ಹಾಡು ಬಂದಾಗಲೂ ಚಿತ್ರಮಂದಿರದ ಪ್ರೇಕ್ಷಕರು ಎದ್ದು ನಿಂತು ಗೌರವ ತೋರಿಸುತ್ತಿದ್ದರು.

ಕನ್ನಡದ ಬಹುತೇಕ ನಾಟಕ ಕಂಪನಿ ಮಾಲಕರು ಗಾಂಧಿ ಚಳುವಳಿಗೆ ಪೂರಕವಾಗಿದ್ದರು. ಈ ಕಂಪನಿಗಳು ತಮ್ಮ ಕಲೆಕ್ಷನ್ನಿನ ಒಂದು ಚಿಕ್ಕಭಾಗವನ್ನು ಚಳುವಳಿಗಾರರಿಗೆ ಕೊಡುತ್ತಿದ್ದವು. ವೇಷ ಮರೆಸಿಕೊಂಡಿದ್ದ ಭೂಗತ ಚಳುವಳಿಗಾರರನ್ನು ಕಂಪನಿಯಲ್ಲಿ ಆಶ್ರಯಕೊಟ್ಟು ಪೋಲಿಸರಿಂದ ರಕ್ಷಿಸುತ್ತಿದ್ದವು. ಅಮೀರಬಾಯಿ ಅವರಿಗೆ ಆಪ್ತರಾಗಿದ್ದ ಬಸವರಾಜ ಮನ್ಸೂರ್ ಹಾಗೂ ನಲವಡಿ ಶ್ರೀಕಂಠಶಾಸ್ತ್ರೀ ಸ್ವತಃ ಹೋರಾಟಗಾರರಾಗಿದ್ದರು. ಖಾದಿ ಧರಿಸುತ್ತಿದ್ದ ಗರೂಡ ಸದಾಶಿವರಾಯರು ನಾಟಕ ಆರಂಭಿಸುವ ಮುಂಚೆ ವಿದೇಶಿ ಬಟ್ಟೆ ಸುಡುವ ಕಾರ್ಯಕ್ರಮ ಮಾಡುತ್ತಿದ್ದರು. ಅವರ ನಾಟಕಗಳ ಪ್ರದರ್ಶನ ಮುಗಿದ ಬಳಿಕವೂ ಪ್ರೇಕ್ಷಕರು ತಾವು ತೊಟ್ಟಿದ್ದ ಪರದೇಶಿ ಬಟ್ಟೆಯನ್ನು ಥಿಯೇಟರಿನ ಮುಂದೆ ಸುಟ್ಟು ಮನೆಗೆ ಹೋಗುತ್ತಿದ್ದರಂತೆ. ಪೌರಾಣಿಕ ನಾಟಕಗಳಲ್ಲಿ, ನಾಟಕದ ವಸ್ತುವಿಗೆ ಸಂಬಂಧ ಇಲ್ಲದಿದ್ದರೂ ನಾಂದಿಪದ್ಯ ಮತ್ತು ಭರತವಾಕ್ಯಗಳಲ್ಲಿ ಭರತ ಮಾತೆ ಮತ್ತು ಗಾಂಧಿಸ್ತುತಿ ಇರುತ್ತಿದ್ದವು. ಗಾಂಧಿಯವರ ಬೆಳಗಾವಿ ಭೇಟಿಯ ಕಾಲಕ್ಕೆ ಚಿಕ್ಕೋಡಿ ಶಿವಲಿಂಗಸ್ವಾಮಿಯವರು 'ಪವಿತ್ರಖಾದಿ' ಎಂಬ ನಾಟಕ ಬರೆದು ಆಡಿಸಿದರು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು
Scan For Digital Colourful
HAMPI TIMES E-paper

ವೃತ್ತಿರಂಗಭೂಮಿಯ ನಾಟಕಗಳು ಜನರ ಮೇಲೆ ಬೀರುತ್ತಿರುವ ಈ ಪ್ರಭಾವವನ್ನು ಕಂಡ ಬ್ರಿಟಿಶ್ ಸರ್ಕಾರವು ಮೊದಲ ಹಂತದಲ್ಲಿ ಐತಿಹಾಸಿಕ ನಾಟಕಗಳ ಪ್ರದರ್ಶನಗಳ ಮೇಲೆ ನಿರ್ಬಂಧ ಹಾಕಿತು. ಮರಾಠಿಯಲ್ಲಿ ಖಾಡಿಲ್ಕರ್ ಅವರ 'ಕೀಚಕವಧೆ' ಹೀಗೆ ನಿಷೇಧಕ್ಕೊಳಗಾದ ನಾಟಕವಾಗಿತ್ತು. ಕನ್ನಡದಲ್ಲಿ 'ನರಗುಂದದ ಮುತ್ತಿಗೆ' 'ಸಂಗೊಳ್ಳಿ ರಾಯಣ್ಣ' 'ಕಿತ್ತೂರು ಚನ್ನಮ್ಮ' ನಿಷೇಧಕ್ಕೆ ಒಳಗಾಗಿದವು. ಎರಡನೇ ಹಂತದಲ್ಲಿ ಸರ್ಕಾರವು ಪ್ರದರ್ಶನಕ್ಕೆ ಮೊದಲು ನಾಟಕ ಕಂಪನಿಗಳು ಅಧಿಕಾರಿಗಳಿಗೆ ನಾಟಕದ ಕತೆಯ ಹಸ್ತಪ್ರತಿ ಕೊಟ್ಟು ಲೈಸೆನ್ಸ್ ಪಡೆಯುವ ಪದ್ಧತಿ ಜಾರಿ ಮಾಡಿತು. ಆದರೆ ಇಂತಹ ನಿಷೇಧಗಳನ್ನು ನಿಷ್ಫಲಗೊಳಿಸುವ ಗುಪ್ತ ಹಾದಿಗಳನ್ನು ರಂಗಭೂಮಿ ನಿರಂತರ ಹುಡುಕಿಕೊಳ್ಳುತ್ತಲಿತ್ತು.

ಅಮೀರ್‌ಬಾಯಿ ಮತ್ತು ಅವರ ತಲೆಮಾರಿನ ಬಹುತೇಕ ರಂಗ ಕಲಾವಿದರು ಇಂತಹ ರಾಷ್ಟ್ರೀಯ ಹೋರಾಟಗಳು ತೀವ್ರವಾಗಿದ್ದ



ಮುಂಬೈ ಕರ್ನಾಟಕದಲ್ಲಿ ಬೆಳೆದವರು. ಚಿಕ್ಕೋಡಿ ಶಿವಲಿಂಗಸ್ವಾಮಿ, ಕಂದಗಲ್ ಹಣಮಂತರಾಯ, ನಲವಡಿ ಶ್ರೀಕಂಠಶಾಸ್ತ್ರಿ ಬಸವರಾಜ ಮನ್ಸೂರ ಅವರ ಜತೆ ಕೆಲಸ ಮಾಡುತ್ತಿದ್ದ ಅಮೀರ್ ಅವರಲ್ಲಿ ರಾಷ್ಟ್ರೀಯವಾದಿ ಮನೋಭಾವ ದೀಪ್ತವಾಗಿತ್ತು. ಆಗಿನ ಬಹುತೇಕ ನಾಟಕಗಳ ನಾಯಕ ಪಾತ್ರಗಳು ಗಾಂಧಿಯನ್ನು ಹೋಲುತ್ತಿದ್ದವು. ಅಮೀರ ಬಾಯಿಯವರ ರಂಗಪ್ರವೇಶಕ್ಕೆ ಕಾರಣವಾದ 'ವಾಣೀವಿಲಾಸ ಸಂಗೀತ ನಾಟಕ ಮಂಡಳಿ'ಯು ಬ್ರಿಟಿಶ್‌ವಿರೋಧಿ ಸಂವೇದನೆಯಿಂದ ಕೂಡಿತ್ತು. ಕಂಪನಿಯ ಅಂಕಪರದೆಯನ್ನು ಮನ್ಸೂರರು ಹೀಗೆ ವರ್ಣಿಸುತ್ತಾರೆ:

"ಅದು ರಾಷ್ಟ್ರೀಯ ಆಂದೋಲನದ ಕಾಲ 1931–32. ಆ ಸಂದರ್ಭದಲ್ಲಿ 'ವಾಣಿವಿಲಾಸ ನಾಟಕ ಮಂಡಳಿ' ತಲೆಯತ್ತಿತ್ತು. ಅದರ ಅಂಕಪರದೆಯನ್ನು ಪೂರ್ತಿ ವ್ಯಾಪಿಸಿದ ಭಾರತದ ನಕ್ಷೆ. ಮಧ್ಯೆ ಮಹಾತ್ಮಾ ಗಾಂಧಿಯವರ ಚಿತ್ರ. ಅವರ ಸುತ್ತಮುತ್ತ ಜವಾಹರಲಾಲ, ಸರ್ದಾರ, ಟಿಳಕ, ರಾನಡೆ ಮೊದಲಾದ ಧುರೀಣರ ಚಿತ್ರ. ಭಾರತಾಂಬೆಯ ಕೈಯಲ್ಲಿ ರಾಷ್ಟ್ರೀಯ ತ್ರಿವರ್ಣಧ್ವಜ. ಅದು ರಾಷ್ಟ್ರೀಯ ಭಾವನೆಯ ಕುರುಹು. ಅಂಕಪರದೆಯನ್ನು ನೋಡಲು ಜನಜಾತ್ರೆ. ಅಂಕಪರದೆಯನ್ನು ನೋಡಿ, ಭಯ–ಭಕ್ತಿಯಿಂದ ಕೈಮುಗಿಯುವ ಮುಗ್ಧ ರಾಷ್ಟ್ರಪ್ರೇಮಿಗಳು." ಕಂಪನಿಯು ಬೆಳಗಾವಿ ಕ್ಯಾಂಪಿನಲ್ಲಿದ್ದಾಗ, ನಾಟಕದ ಆರಂಭದಲ್ಲಿ ವೇದಿಕೆಯಲ್ಲಿ ಸಾಂಬ್ರಾಣಿ ಹೊಗೆ ಹಾಕುವ ಕಾಲಕ್ಕೆ ಅಂಕಪರದೆಗೆ ಬೆಂಕಿಬಿದ್ದು ಸುಟ್ಟುಹೋಯಿತು. ಈ ಪ್ರಕರಣದ ಹಿಂದೆ ಪೋಲಿಸರ ಫಿತೂರಿಯಿತ್ತು ಎಂದೇ ಜನ ಆಡಿಕೊಂಡರು.

ಅಮೀರ್‌ಬಾಯಿ ಮುಂಬೈಗೆ ಹೋಗುವ ಹೊತ್ತಿಗೆ ಅದು ಬ್ರಿಟಿಶ್ ವಿರೋಧಿ ಆಂದೋಲನಗಳ ಕುದಿಭೂಮಿಯಾಗಿತ್ತು. ಕ್ವಿಟ್ ಇಂಡಿಯಾ ಘೋಷಣೆ ಮುಂಬೈನಲ್ಲೇ ಆದ ಕಾರಣ, ಮುಂಬೈ ಅನೇಕ ತೀವ್ರ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಟ್ಟಿತು. ಚಳುವಳಿಗೆ ಎಲ್ಲ ಕ್ಷೇತ್ರದ ಜನರೂ ಧುಮುಕುತ್ತಿದ್ದರು. ಅಬ್ದುಲ್ ಕರೀಂಖಾನರು ಗಾಂಧಿ ಚಳುವಳಿಗೆ ಸಂಗೀತ ಕಛೇರಿ ನಡೆಸಿ ಹಣ ಒಟ್ಟುಮಾಡುವಲ್ಲಿ ತೊಡಗಿದ್ದರು. ಆ ಹೊತ್ತಿನ ಸಿನಿಮಾಗಳು ಸಹಜವಾಗಿ ವಸಾಹತುಶಾಹಿ ವಿರೋಧಿ ಚಳುವಳಿಯ ನೆಲೆಗಳನ್ನು ಒಳಗೊಂಡಿದ್ದವು. ಗಾಂಧಿ, ನೆಹರೂ, ಭಗತಸಿಂಗ್ ಮೊದಲಾದ ರಾಷ್ಟ್ರೀಯ ವೀರರ ಜೀವನವನ್ನಾಧರಿಸಿದ ಸಿನಿಮಾಗಳು ಸಾಮಾನ್ಯವಾಗಿದ್ದವು. ಮೂಕಿಚಿತ್ರಗಳ ಕಾಲಕ್ಕೇ ಬ್ರಿಟಿಶ್ ವಿರೋಧಿ ಆಯಾಮದ ಪ್ರವೇಶವಾಗಿತ್ತು. ಬಾಬೂರಾವ್ ಪೇಂಟರ್ ಅವರ 'ಸೈರಂಧ್ರಿ', ಬ್ರಿಟಿಶರ ದಬ್ಬಾಳಿಕೆಯನ್ನು ಪ್ರತಿಭಟಿಸುವ ದನಿಯನ್ನು ಒಳಗೊಂಡಿತ್ತು. ಮುಂದೆ ವಿ. ಶಾಂತಾರಾಂ ಸಹ 'ಸೈರಂಧ್ರಿ' ತಯಾರಿಸಿದರು. ಕನ್ನಡದ 'ರಾಜಸೂಯ ಯಾಗ' ಚಿತ್ರವೂ ದುರ್ಯೋಧನನ ಮೇಲೆ ಪಾಂಡವರ ಕೋಪ–ಛಲಗಳನ್ನು ಕೆರಳಿಸುವ ದ್ರೌಪದಿಯ ಕತೆಯಾಗಿದೆ. ಮೋಸದಿಂದ ರಾಜ್ಯ ಕಿತ್ತುಕೊಂಡ ಕೌರವರನ್ನಾಗಿ ಆಂಗ್ಲರನ್ನು ಕಲ್ಪಿಸಿಕೊಂಡಿದ್ದ ಈ ಚಿತ್ರಗಳು, ಬಿಡುಗಡೆಗೆ ಯುದ್ಧ ಅನಿವಾರ್ಯ ಎಂಬ ಸಂದೇಶವನ್ನು ನೇರವಾಗಿ ಬೀರುತ್ತಿದ್ದವು.

ಈ ಹಿನ್ನೆಲೆಯಲ್ಲಿ ಅಮೀರ್‌ಬಾಯಿ 'ಕಿಸ್ಮತ್' ಚಿತ್ರಕ್ಕೆ ಹಾಡಿದ 'ದೂರ್ ಹಟೊ' ಹಾಡನ್ನು ಗಮನಿಸಬಹುದು. ಈ ಹಾಡು ಭಾರತದ ನಕ್ಷೆಯ ಹಿನ್ನೆಲೆಯಲ್ಲಿ ಒಬ್ಬ ಢಕ್ಕೆ ಬಾರಿಸುವ ಮೂಲಕ ಆರಂಭವಾಗುತ್ತದೆ. ಸರ್ವ ಧರ್ಮಗಳಿಗೆ ಹಾಗೂ ಎಲ್ಲ ಪ್ರಾಂತ್ಯಗಳಿಗೆ ಸೇರಿದ ತರುಣ ತರುಣಿಯರು ಪ್ರತಿಜ್ಞೆ ಮಾಡುವವರಂತೆ ಮುಷ್ಠಿ ಬಿಗಿಹಿಡಿದು ಗಾಳಿಯಲ್ಲಿ ಬೀಸುತ್ತ ಹಾಡುವರು.

**ಜಹಾಂ ಹಮಾರ ತಾಜ್ ಮಹಲ್ ಹೈ ಓರ್ ಕುತುಬ್ ಮಿನಾರಾ ಹೈ**
**ಜಹಾ ಹಮಾರೆ ಮಸ್ಜಿದ್ ಮಂದಿರ್ ಸಿಖ್ಖೋಂಕ ಗುರುದ್ವಾರಾ ಹೈ**
**ಧರತೀ ಪರ್ ಖದಂ ಬಡಾನಾ ಅತ್ಯಾಚಾರ್ ತುಮಾರಾ ಹೈ**
**ಆಜ್ ಹಿಮಾಲಯಾಕೆ ಚೋಟೀಸೇ ಫಿರ್ ಹಮ್ನೆ ಲಲ್‌ಕಾರಾ ಹೈ**
**ದೂರ್‌ಹಟೊ ದೂರ್‌ಹಟೊ, ಅಯ್ ದುನಿಯಾ ವಾಲೊ,**
**ಹಿಂದೂಸ್ತಾನ್ ಹಮಾರಾ ಹೈ**

ಭಾರತದ ನಕ್ಷೆಯುಳ್ಳ ಪರದೆ ತೆರೆಯುವ ಮೂಲಕ ಈ ಹಾಡು ಥಿಯೇಟರಿನಲ್ಲಿ ಆರಂಭವಾಗುತ್ತದೆ. ಮೊದಲು ಆಜಾದ್‌ಹಿಂದ್‌ನ ಸೈನಿಕರು ತುಪಾಕಿ ಹೆಗಲ ಮೇಲಿಟ್ಟುಕೊಂಡು ಶಿಸ್ತಿನಿಂದ ಬರುತ್ತಾರೆ. ನಂತರ ಸರ್ವಧರ್ಮಗಳಿಗೆ ಸೇರಿದ ಹಲವು ಪ್ರಾಂತ್ಯದ ವೇಷ ಧರಿಸಿದ ತರುಣ ತರುಣಿಯರು ಹಿನ್ನೆಲೆಯಲ್ಲಿ ಚಲಿಸುತ್ತ, ಸಂಕಲ್ಪ ಮಾಡುವವರಂತೆ ಮುಷ್ಟಿಗಟ್ಟಿದ ಕೈಯನ್ನು ಗಾಳಿಯಲ್ಲಿ ಬೀಸುತ್ತ ಕೋರಸ್ ಹಾಡುವರು. ಈ ಹಾಡು ಮತ್ತು ದೃಶ್ಯ ಎರಡೂ ಕೂಡ ಕೇವಲ ಬ್ರಿಟೀಶ್ ವಿರೋಧವನ್ನು ಒಳಗೊಂಡಿರದೆ, ಭಾರತೀಯರ ಧರ್ಮಾತೀತ ಪ್ರಾಂತ್ಯಾತೀತ ಏಕತೆಯನ್ನು ಸಹ ಪ್ರತಿಪಾದಿಸುತ್ತವೆ. ಜರ್ಮನಿ ಜಪಾನಿಯರಿಗೆ ಮಣಿಯಬೇಡವೆಂದು ಭಾರತಮಾತೆಗೆ ಹೇಳುತ್ತ, ಎರಡನೇ ಮಹಾಯುದ್ಧದಲ್ಲಿ ತೊಡಗಿದ್ದ ಫ್ಯಾಸಿಸ್ಟ್ ದೇಶಗಳನ್ನೂ ವಿಮರ್ಶಿಸುತ್ತದೆ. ಈ ಹಾಡು ನಡೆಯುವಾಗ ಥಿಯೇಟರಿನಲ್ಲಿದ್ದ ಪ್ರೇಕ್ಷಕರು ಎದ್ದು ದನಿಗೂಡಿಸುತ್ತಿದ್ದರಂತೆ.

ಭಾರತದ ಬ್ರಿಟಿಶ್ ವಿರೋಧಿ ಚಳುವಳಿ ಗಾಂಧಿ ಮತ್ತು ಕಾಂಗ್ರೆಸ್ ಚಳುವಳಿಯಾಗಿಯೇ ಬಿಂಬಿತವಾಗಿದೆ. ಆದರೆ ಇದರೊಳಗೆ ಲೇಖಕರು, ಉದ್ಯಮಿಗಳು, ಕ್ರಾಂತಿಕಾರರು, ರೈತರು, ಕಲಾವಿದರು ಪ್ರಮಾಣದಲ್ಲಿ ತೊಡಗಿಕೊಂಡಿದ್ದರು. ಕಲಾವಿದರ ಪಾತ್ರವು ಬಹುಶಃ ಮುಖ್ಯವಾಗಿತ್ತು. ಕಾರಣ, ಸಿನಿಮಾ ಮತ್ತು ನಾಟಕದಂತಹ ಜನರನ್ನು ನೇರವಾಗಿ ತಲುಪುವ ಪ್ರಭಾವಶಾಲಿ ಮಾಧ್ಯಮಗಳಲ್ಲಿ ಅವರು ರಾಜಕೀಯ ಸಂದೇಶಗಳನ್ನು ಸಮರ್ಥವಾಗಿ ತಲುಪಿಸ ಬಲ್ಲವರಾಗಿದ್ದರು. ಈ ವಿಶಿಷ್ಟ ರಾಜಕೀಯ ಹೋರಾಟದಲ್ಲಿ 'ಫ್ರೀ ವಿಮೆನ್' ಎನ್ನಲಾಗುತ್ತಿದ್ದ ಆ ಕಾಲದ ಕಲಾವಿದೆಯರೂ ಭಾಗವಹಿಸಿದರು.

ವ್ಯಂಗ್ಯವೆಂದರೆ, ಅಮೀರ್‌ಬಾಯಿ ಕಾಲದ 'ಮುಕ್ತ' ಚಿಂತನೆಯ ಕಲಾವಿದೆಯರು ತಮ್ಮ ವೈಯಕ್ತಿಕ ಮತ್ತು ನಾಡಿನ ಸ್ವಾತಂತ್ರ್ಯವನ್ನು ಏಕಕಾಲಕ್ಕೆ ಗಳಿಸುವಂತೆ ಹಾಡುತ್ತ ನಟಿಸುತ್ತ, ಸಾಂಪ್ರದಾಯಿಕ ವಿವಾಹ ಮತ್ತು ಕುಟುಂಬಗಳ ಚೌಕಟ್ಟು ಮೀರಿದ ಬದುಕನ್ನು ಆರಂಭಿಸಿದ ಹೊತ್ತಲ್ಲೇ, ಮಹಿಳೆಯರನ್ನು ಪತಿನಿಷ್ಠೆಗೂ ಕುಟುಂಬಕ್ಕೆ ಕಟ್ಟಿಹಾಕುವಂತಹ ನಾಟಕ ಮತ್ತು ಸಿನಿಮಾಗಳು ಸಹ ತಯಾರಾಗುತ್ತಿದ್ದವು. ಹಿಂದಿಗೆ ಹೋಲಿಸಿದರೆ, ಕನ್ನಡ ಚಿತ್ರಗಳಲ್ಲಿ ವಸಾಹತುಶಾಹಿ ಪ್ರತಿರೋಧದ ದನಿ ಕಡಿಮೆಯೇ. ಕನ್ನಡದಲ್ಲಿ ಡಿ.ವಿ. ರಾಮಸ್ವಾಮಿ ಮುಂತಾದ ನಿರ್ಮಾಪಕರು ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಆದರೆ ಇಂತಹವರ ಸಂಖ್ಯೆ ಕಡಿಮೆಯಿತ್ತು.

ಅಮೀರ್‌ಬಾಯಿ ನಟನೆಯ 'ಚಿರಂಜೀವಿ' ಚಿತ್ರದಲ್ಲಿ–ಅದು ಮುಂಬೈ ಕರ್ನಾಟಕದಲ್ಲಿ ನಿರ್ಮಾಣವಾದ ಕಾರಣದಿಂದಲೊ ಏನೊ– ಸ್ವಾತಂತ್ರ್ಯ ಚಳುವಳಿಯ ಆಯಾಮ ಹೆಚ್ಚು ಸ್ಪಷ್ಟವಾಗಿದೆ.

1947ರ ನಂತರ ಅವರು ನಟಿಸಿದ ಕನ್ನಡ ಚಿತ್ರಗಳಲ್ಲಿ ಈ ಗಾಂಧಿವಾದಿ ಆಯಾಮವು ಬೇರೆಬೇರೆ ನಮೂನೆಯಲ್ಲಿ ಮುಂದುವರೆಯಿತು. 'ಶ್ರೀನಿವಾಸ ಕಲ್ಯಾಣ' ಚಿತ್ರವು 'ಮಹಾತ್ಮ ಪಿಕ್ಚರ್ಸ್' ಲಾಂಛನದಡಿ ತಯಾರಾಯಿತು. ಈ ಸಂಸ್ಥೆಯನ್ನು ಸ್ಥಾಪಿಸಿದ ಡಿ. ಶಂಕರ್‌ಸಿಂಗ್, 'ನೆಹರೂ ಟೂರಿಂಗ್ ಟಾಕೀಸ್' ಹಾಗೂ 'ಮಹಾತ್ಮ ಟೂರಿಂಗ್ ಟಾಕೀಸ್' ನಡೆಸುತ್ತಿದ್ದರು. ಇಲ್ಲಿರುವ 'ಟೂರಿಂಗ್' ಪದವು ಗಾಂಧೀಜಿಯವರು ಮಾಡುತ್ತಿರುವ ತಿರುಗಾಟಗಳ ರೂಪಕದಂತಿದೆ. ಲಾಂಛನದಲ್ಲೂ ಗಾಂಧೀಜಿ ಕೋಲು ಹಿಡಿದು ನಡೆಯುತ್ತಿರುವ ಚಿತ್ರವಿದೆ. ರಜಪೂತ ಸಮುದಾಯಕ್ಕೆ ಸೇರಿದ ಶಂಕರ್‌ಸಿಂಗ್ ಹಾಸನ ಜಿಲ್ಲೆಯ ಅರಸೀಕೆರೆಯವರು. ಗಾಂಧೀಜಿಯಿಂದ ಗಾಢವಾಗಿ ಪ್ರಭಾವಿತರಾಗಿ ಕಾಂಗ್ರೆಸ್ ಚಳುವಳಿಯಲ್ಲಿ ಭಾಗವಹಿಸಿದವರು. ಇವರ ತಂಡದಲ್ಲಿದ್ದ ಸದಸ್ಯರಾದ ಬಿ. ವಿಠಲಾಚಾರ್ಯ, ವಿಶ್ವನಾಥಶೆಟ್ಟಿ, ಗೋಪಾಲಕೃಷ್ಣ ಶೆಟ್ಟಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದವರು.

1940ರ ದಶಕದಲ್ಲಿ ಅಮೀರ್‌ಬಾಯಿ ನಟಿಸಿದ ಮತ್ತು ಹಾಡಿದ ಹೆಚ್ಚಿನ ಚಿತ್ರಗಳು ರಾಷ್ಟ್ರೀಯ ಆಂದೋಲನದ ಆಶಯವನ್ನು ಒಳಗೊಂಡಿದ್ದವು. ಈ ಚಿತ್ರಗಳ ನಿರ್ಮಾಪಕ ಹಾಗೂ ನಿರ್ದೇಶಕರೂ ಸಾಮಾನ್ಯವಾಗಿ ಚಳುವಳಿ ಹಿನ್ನೆಲೆಯವರಾಗಿದ್ದರು. ಅಮೀರ್ "ಕಿಸ್ಮತ್"ಗಾಗಿ ಹಾಡಿದ 'ಆಜ್ ಹಿಮಾಲಯ್ ಕೀ ಚೋಟೀಸೆ ಫಿರ್ ಹಮನೆ ಲಲಕಾರಾ ಹೈ, ದೂರ್ ಹಟೋ ಅಯ್ ದುನಿಯಾವಾಲೆ ಹಿಂದೂಸ್ಥಾನ್ ಹಮಾರಾ ಹೈ' ಎಂಬ ಹಾಡು, 40ರ ದಶಕದಲ್ಲಿ ವಿಶಿಷ್ಟವಾದ ಸಂಚಲನಕ್ಕೆ ಕಾರಣವಾಯಿತು. ಪ್ರದೀಪ್ ರಚಿಸಿದ ಈ ಗೀತೆ ಬ್ರಿಟೀಶ್ ಸೆನ್ಸಾರ್ ಮಂಡಳಿಯಿಂದ ಕಣ್ಣುತಪ್ಪಿಸಿಕೊಂಡು ಬಂದಿತ್ತು. ತಪ್ಪಿನ ಅರಿವು ಸರ್ಕಾರಕ್ಕೆ ನಂತರ ಗೊತ್ತಾಯಿತು. ಅದು ಚಿತ್ರವನ್ನು ನಿಷೇಧಿಸಲು ಯತ್ನಿಸಿತು. ಸರ್ಕಾರವು ಬಂಧಿಸಬಹುದೆಂದು ಅನಿಲ್ ಬಿಸ್ವಾಸ್ ಕೆಲಕಾಲ ಭೂಗತರೂ ಆಗಿದ್ದರು. ಆದರೆ ಅದು ಕ್ರಮ ವಹಿಸುವುದಕ್ಕೆ ತೀರ ತಡವಾಗಿತ್ತು. ಚಲೇಜಾವ್ ಚಳುವಳಿಯಲ್ಲಿ ಪ್ರತಿಯೊಬ್ಬ ಸ್ವಯಂಸೇವಕ– ಸೇವಕಿಯರೂ ಕೋರಸ್ಸಿನಲ್ಲಿ ಈ ಹಾಡನ್ನು ಹಾಡುತ್ತಿದ್ದರು.

# ಒಂದು ದಿನದ ತರಬೇತಿ ಕಾರ್ಯಾಗಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ವತಿಯಿಂದ ಜಲ್ ಜೀವನ್ ಮಿಷನ್ ಯೋಜನೆಯ ಅನುಷ್ಠಾನ ಹಾಗೂ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಭಾಗದ ಎಲ್ಲಾ ಗುತ್ತಿಗೆದಾರರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಅಕ್ಟೋಬರ್ 7ರಂದು ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ ಅವರು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಜಲ್ ಜೀವನ್ ಮಿಷನ್ ಯೋಜನೆಯ ಅನುಷ್ಠಾನದಲ್ಲಿ ಮನೆ ಮನೆಗೆ ಗಂಗೆ ಎನ್ನುವ ಪರಿಕಲ್ಪನೆಯೊಂದಿಗೆ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರನ್ನು ಪೂರೈಸುವ ಮಹತ್ತರ ಕಾರ್ಯ ಈ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆ ಕಾರ್ಯಾಗತಗೊಳಿಸುವಲ್ಲಿ ಎಲ್ಲಾ ಗುತ್ತಿಗೆದಾರರ ಪಾತ್ರ ಬಹುಮುಖ್ಯವಾದ್ದು, ಗ್ರಾಮೀಣ ಜನರಿಗೆ ಅನುಕೂಲವಾಗುವ ರೀತಿಯಲ್ಲಿಕಾಮಗಾರಿಗಳನ್ನುಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಬೇಕು ಎಂದು ಗುತ್ತಿಗೆದಾದರಿಗೆ ಸಲಹೆ ನೀಡಿದರು.

ನಂತರ ಮಾತನಾಡಿದ ಕಾರ್ಯಪಾಲಕ ಅಭಿಯಂತರರಾದ ದೀಪಾ ಎಸ್. ಅವರು ಗುತ್ತಿಗೆದಾರರು ನಿಗದಿತ ಕಾಲವಧಿಯಲ್ಲಿ ಕಾಮಗಾರಿಯನ್ನು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ, ಇಲಾಖೆಗೆ ಸಹಕಾರಿಯಾಗಬೇಕು ಎಂದು ಹೇಳಿದರು.

ಸಾಮಾಜಿಕಅಭಿವೃದ್ಧಿಸಮಾಲೋಚಕರಾದ ಮಂಜುನಾಥ ಎಸ್. ಅವರು ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮತ್ತು ಪರಿಸರ ರಕ್ಷಣೆ ಕುರಿತು ಗುತ್ತಿಗೆದಾರರಿಗೆ ತರಬೇತಿ ನೀಡಿದರು.

ಕಾರ್ಯಗಾರದಲ್ಲಿ ಲೆಕ್ಕಾಧೀಕ್ಷಕರಾದ ಮಾಲತೇಶ್ ಮರೇಗೌಡ ಹಾಗೂ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

# ಡಿ.ದೇವರಾಜ ಅರಸು ವಸತಿ ನಿಲಯಕ್ಕೆ ತಹಶೀಲ್ದಾರ ಭೇಟಿ; ಪರಿಶೀಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಹಸೀಲ್ದಾರರಾದ ಶೃತಿ ಎಂ.ಎಂ ಅವರು ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯಕ್ಕೆ ಅಕ್ಟೋಬರ್ 8ರಂದು ಭೇಟಿ ನೀಡಿ ಪರಿಶೀಲಿಸಿದರು.

ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತವಾಗಿ ಇರಬೇಕಾದ ಸೌಕರ್ಯಗಳು, ಆಹಾರದ ಗುಣಮಟ್ಟ, ಶೌಚಾಲಯಗಳ ಶುಚಿತ್ವದ ಬಗ್ಗೆ ಅವರು ಪರಿಶೀಲಿಸಿದರು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡಬೇಕು. ಅವರ ಆರೋಗ್ಯದ ಕಡೆಗೆ ಗಮನಹರಿಸಬೇಕು ಎಂದು ವಸತಿ ನಿಲಯದ ಸಿಬ್ಬಂದಿಗೆ ತಿಳಿಸಿದರು.

ವಿದ್ಯಾರ್ಥಿಗಳು ಊಟ ಮಾಡುವ ಸ್ಥಳ ಮತ್ತು ವಿದ್ಯಾರ್ಥಿಗಳ ಕೊಠಡಿಗಳನ್ನು ಪರಿಶೀಲಿಸಿದ ಅವರು, ಸ್ವಚ್ಛತೆ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಹಾಗೂ ವಸತಿ ನಿಲಯದಲ್ಲಿರುವ ಸಣ್ಣ ಪುಟ್ಟ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕು ಎಂದು ವಸತಿ ನಿಲಯದ ಮೇಲ್ವಿಚಾರಕರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಕಚೇರಿಯ ಶಿರಸ್ತೇದಾರರಾದ ಶ್ರೀಧರ್ ಮತ್ತು ಪ್ರ.ದ.ಸ. ಮಂಜುನಾಥ, ವಾರ್ಡನ್ ಅಶ್ವಿನಿ, ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

## ಕವಿ ಮನಸು

### ಹೊಸಪೇಟೆ ದಸರ

ನೋಡ ಬನ್ನಿ ನಮ್ಮೂರ ದಸರಾ
ಮೈಸೂರಂತೆ ಅಲಂಕಾರ ಗೊಂಡೈತಿ
ಹೊಸಪೇಟೆ ನಗರ
ನೋಡಲು ಬರುತಾರೆ ಅಕ್ಕ ಪಕ್ಕದ ಊರ ಜನ
ಕಣ್ತುಂಬಿಕೊಳ್ಳವರು ದೇವಿಯ
ಅಲಂಕಾರವನ್ನ

ಮಡಿಯಲಿ ದಿನ ಪೂಜೆ ಮಾಡುತಾರೆ
ಪಲ್ಲಕ್ಕಿ ಹೊತ್ತು ಊರ ಆಡುತಾರೆ
ಓಣಿ ಓಣಿ ದೇವಿಯ ಹೊತ್ತು ತಿರುಗುತಾರೆ
ಸಂಜೆ ಗುಡಿಗೆ ದೇವಿಯರನ್ನ ಕೂರಿಸುತಾರೆ

ದೇವಿಗೆ ಕಂಕಣ ಕಟ್ಟುವರು
ಪ್ರಸಾದ ನೈವೇದ್ಯಕೆ ಇಡುವರು
ದೀಪ ಧೂಪವಾ ದೇವಿಗೆ ಬೆಳಗುವರು
ಮಹಾ ಮಂಗಳಾರತಿ ತಾಯಿಗೆ ಮಾಡುವರು

ಎಂಟು ದಿನಗಳ ಕಾಲ ನಡೆಸುತಾರೆ
ಒಂಬತ್ತನೇ ದಿನ ಪಲ್ಲಕ್ಕಿಲಿ ದೇವಿನ ಇಡುತಾರೆ
ಓಡುತ ಧರ್ಮರ ಗುಡ್ಡಕೆ ಹೋಗುತಾರೆ
ಚನ್ನಬಸಪ್ಪ ದೇವರ ದರುಶನ ಪಡಿತಾರೆ

ಸಾಗುವವರು ಹತ್ತಿರದ ಬನ್ನಿ ಮರಕೆ
ಬನ್ನಿ ಮುಡಿಯುವರು ದೇವಿಯ ಕಳಶಕೆ
ಪಲ್ಲಕ್ಕಿ ಹಿಡಿದು ಹೊರಡುವರು ಊರ ಕಡೆಗೆ
ಎಲ್ಲಾ ದೇವಿಯರು ಸೇರುವರು ಒಂದೆಡೆಗೆ

ಇಡೀ ರಾತ್ರಿ ಭಕ್ತರ ಭಜನೆಗೆ ದೇವಿ
ಸಂತೃಪ್ತಳಾಗುವಳು
ನಸುಕಿನಲಿ ಗರ್ಭಗುಡಿಯ ಸೇರುವಳು
ಸಂಜೆಯಲಿ ದೇವಿಗೆ ಬನ್ನಿ ಮುಡಿಯುವರು
ಬನ್ನಿ ತಗೊಂಡು ಬಂಗಾರದಂಗ ಇರೋಣ
ಎನ್ನುವರು

ಕೂಡಿ ಮಾಡಿದೆವು ದಸರ ಹಬ್ಬ ಬಲು ಜೋರ
ಹಿಂಗ ನಡೆಸಿಕೊಂಡು ಬಂದಾರ ನಮ್ಮ ಪೂರ್ವಜರ
ದೇವಿ ತೋರಿದಳು ನಮ್ಮ ಮೇಲೆ ಪ್ರೀತಿ ಮಮಕಾರ
ಇದಾಗೈತಿ ನಮ್ಮ ಹೊಸಪೇಟೆ ದಸರ

– ವಿ ಪರಶುರಾಮ ಅಮರಾವತಿ,
ಹೊಸಪೇಟೆ

### ವಿದೂಷಕ

ಜೀವನದಲ್ಲಿ ನಾವೆಲ್ಲಾ ವಿದೂಷಕರೇ
ಮೇಲೊಬ್ಬ ಇರುವನು ಪ್ರೇಕ್ಷಕನು
ಅವನು ಆಡಿಸಿದಂತೆ ಆಟವಾಡುವ
ವಿದೂಷಕರು ನಾವಲ್ಲವೇನು?!

ನಮ್ಮ ಜೀವನ ಎಂಬ ರಂಗಸ್ಥಳದಲ್ಲಿ
ಎಲ್ಲರಿಗೂ ಒಂದೊಂದು ಪಾತ್ರವ ನೀಡಿ
ಪಾತ್ರಕ್ಕೆ ಬಣ್ಣವ ತುಂಬಿ ವೇಷ
ಹಾಕಿಸುವನು
ಮೇಲಿರುವ ಭಗವಂತನೆಂಬ ವಿದೂಷಕನು!

ಬಾಳಿನ ಕಲ್ಲು ಮುಳ್ಳುಗಳ ಹಾದಿಯಲ್ಲಿ
ಅನೇಕ ಪಾತ್ರಗಳ ನಮಗೆ ಹಾಕಲು ಕೊಟ್ಟು
ಪಾತ್ರಧಾರಿಗಳ ಪಾತ್ರಗಳ ಲೆಕ್ಕಾಚಾರ
ಮಾಡಿ
ಸ್ವರ್ಗ ನರಕವ ಕರುಣಿಸುವನು
ಸೂತ್ರಧಾರನು!

ಬಾಳಿನಲ್ಲಿ ಕಷ್ಟವೇ ಇರಲಿ ಸುಖವೇ ಇರಲಿ
ನಮ್ಮಿಚ್ಛೆಯಂತೆ ಯಾವುದಿಲ್ಲ ಎಂಬುದರಿತು
ನಗುನಗುತಾ ಸಾಗಲೇಬೇಕು ಅವ
ಮೆಚ್ಚುವಂತೆ
ಅವನಾಡಿಸುವ ವಿದೂಷಕರು
ನಾವಲ್ಲವೇನು?!

– ಪ್ರಜ್ಞಾ ರವೀಶ್, ಕುಳಮರ್ವ

ಉಚಿತ-ಖಚಿತ!
ಪತ್ರಿಕೆಯ ಓದು
ಕಣ್ಣಿಗೆ ಹಿತ,
ಮೊಬೈಲ್ ಓದು
ಉಚಿತ,
ಕಣ್ಣಿಗೆ ಹಾನಿ
ಖಚಿತ!

ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ
ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ ಬೆಲೆ ರೂ 2

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಹ್ಯಾಪಿ ಬರ್ತಡೇ 2.06 m ಯಂಗ್ ಚಾಂಪಿಯನ್



ಬದುಕನ್ನು ಸಾರ್ಥಕತೆಯಿಂದ ಬದುಕಿ ಬಾಳಬೇಕು. ಸುಮಾರು ಜನರು ಎಲ್ಲವೂ ಇದ್ದರು ಕೂಡ, ಏನು ಇಲ್ಲ, ಹೇಗೆ ಮಾಡಬೇಕು, ಏನು ಮಾಡಬೇಕು, ಇದು ಇಲ್ಲ, ಅದು ಇಲ್ಲ ಎನ್ನುತ್ತ ಜೀವನದ ಅಮೂಲ್ಯ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಿದ್ದಾರೆ. ಮಾನವ ಜನುಮ ಮರಳಿ ಬರುತ್ತದೆ ಎನ್ನುವುದು ಯಾರಿಗೆ ಗೊತ್ತು ರಿ.... ಹುಟ್ಟಿನಿಂದ ಸಾಯುವ ವರೆಗೂ ಕಳೆದ ಪ್ರತಿ ಕ್ಷಣ ಹಿಂದಿರುಗಿ ಬರಲು ಸಾಧ್ಯವೆ?....ದಶಲಕ್ಷ ಕೋಟಿ ಜೀವರಾಶಿಗಳಲ್ಲಿ ಶ್ರೇಷ್ಠವಾದ ಜನುಮ ಅಂದರೆ ಅದು ಮಾನವ ಜನುಮ ಮಾತ್ರ. ದೇವರು ನಮಗೆ ಕೊಟ್ಟ ದೊಡ್ಡ ಅವಕಾಶ ಮನುಷ್ಯನಾಗಿ ಹುಟ್ಟಿದ್ದು. ಈ ಜೀವನದಲ್ಲಿ ಬದುಕಬೇಕು, ಬದುಕಿನ ಪ್ರತಿಕ್ಷಣ ಜೀವಿಸಬೇಕು, ಅದನ್ನು ಸಾರ್ಥಕ ಗೊಳಿಸಬೇಕು.

ಇಲ್ಲೊಬ್ಬ ಅತಿ ಕಿರಿಯ ವಯಸ್ಸಿನಲ್ಲಿ ದೊಡ್ಡ ಸಾಧನೆಯನ್ನು ಮಾಡಿದ್ದಾನೆ. ಅತಿದೊಡ್ಡ ಪ್ರಜಾಪ್ರಭುತ್ವ ದೇಶದ ಹಿಮಾಚಲ ಪ್ರದೇಶದ ಸಣ್ಣ ಹಳ್ಳಿಯ ಬಡ ಕುಟುಂಬಲ್ಲಿ,3 ನೆಯ ಅಕ್ಟೋಬರ್ 1999 ರಲ್ಲಿ ಹುಟ್ಟಿದ ಸಾಧಕ ನಿಷಾದ್ ಕುಮಾರ್, ಇವನು ಕಡು ಬಡತನದ ಕುಟುಂಬದಲ್ಲಿ ಹುಟ್ಟಿದ್ದಾನೆ, ತನ್ನ 8 ನೇಯ ವಯಸ್ಸಿನಲ್ಲಿ, ಕುಟುಂಬಕ್ಕೆ ಆಸರೆ ಆದ 1 ಎಕ್ಕರೆ ಜಮೀನಿನಲ್ಲಿ ಅಮ್ಮನೊಂದಿಗೆ ಪೈರು ಕಟಾವು ಮಾಡುತ್ತಿರುವಾಗ ಆಕಸ್ಮಿವಾಗಿ ತನ್ನ ಬಲಗೈ ಕಟ್ಟಾಗುತ್ತದೆ, ಪಾಪ ಗಾಬರಿಗೊಂಡ ಬಾಲಕ ನೋವಿನೊಂದಿಗೆ ರಕ್ತದ ಮೂಡುವಿನಲ್ಲಿ ಬಿದ್ದಿದ್ದ ತನ್ನ ಕೈಯಿಯನ್ನು ನೋಡುತ್ತಾ ಅಳುತ್ತಿರಲು, ತನ್ನ ಪಾಲಕರು ಆಸ್ಪತ್ರೆಗೆ ಕರೆದುಕೊಂಡು ಹೋದರು, ಆದರೆ ಕೈ ಪುನಃ ಜೋಡಿಸಲು ಸಾಧ್ಯವಿಲ್ಲ ಎಂದು ಡಾಕ್ಟರ್ ಹೇಳಿದರು, ಆ ಬಾಲಕ ನಿರಾಶೆಯಿಂದ ಡಾಕ್ಟರ್ ನಾನು ಈಗ ಸೈನ್ಯ ಸೇರಲು ಸಾಧ್ಯವಿಲ್ಲವೇ? ಎನ್ನುತ್ತಿದಂತ್ತೆ ಅತ್ಯಂತ ಭಾವುಕರಾದ ಡಾಕ್ಟರ್ ಹೇಳಿದ್ದು ಸಾಧನೆಗೆ ಕೈ ಒಂದೇ ಅಲ್ಲ,ಹಲವಾರು ಮಾರ್ಗಗಳು ಇದಾವೆ, ಕೈ ದೇಹದ ಒಂದು ಭಾಗ ಮಾತ್ರ.... ನೀವು ದೇಶ ಸೇವೆಗಾಗಿ ಪಣ ತೊಟ್ಟಿದ್ದೀಯಾ ಅಲ್ವಾ ಸೇನೆ ಮೂಲಕವೆ ಏಕೆ? ಇನ್ನೂ ಅನೇಕ ದಾರಿಗಳು ಇದಾವೆ, ನೀನು ಕನಸು ಕಾಣುವುದನ್ನು ಬಿಡಬೇಡ, ನಿನ್ನ ಗುರಿ ಹೀಗೆ ಇರಲಿ ಎನ್ನುತ್ತ ಪುಟ್ಟ ಬಾಲಕನಿಗೆ ಧೈರ್ಯ ತುಂಬಿದರು.

ಗುಣಮುಖನಾದ ಬಾಲಕ ನಿರಾಸೆಯಿಂದ ಬದುಕುತ್ತಿದ್ದನು, ತನ್ನ ಗೆಳೆಯರೊಂದಿಗೆ ಆಟವಾಡಲು ಹೋದಾಗ ನೀನು ಅಸಮರ್ಥನು ಎನ್ನುತ್ತ ಗೆಳೆಯರು ಆಟ ಆಡಲು ನಿರಾಕರಿಸುತ್ತಿದ್ದರು. ಮುಂದೆ ಶಾಲೆ ಯಲ್ಲಿ ಶಿಕ್ಷಕರ ಪ್ರೋತ್ಸಾಹದಿಂದ ಎಲ್ಲ ಚಟುವಟಿಕೆ ಗಳಲ್ಲಿ ಭಾಗವಹಿಸುತ್ತಿದಂತ್ತೆ ಮತ್ತೆ ಕ್ರೀಡೆಗಳಲ್ಲಿ ಭಾಗವಹಿಸಿ ಸ್ಪರ್ಧೆಗಳಲ್ಲಿ ವಿಜೇತನಾಗುತ್ತಿದ್ದಂತೆ, ಮತ್ತೆ ತನ್ನ ಕನಸನ್ನು ಕಾಣಲಾರಾಂಭಿಸಿದನು.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ
Scan For Digital Colourful
HAMPI TIMES E-paper

ನಿಷಾದ್ ಹುಬಳಿ ಮಟ್ಟ, ತಾಲೂಕು, ಜಿಲ್ಲೆ ಹೀಗೆ ಕ್ರೀಡಾಕೂಟಗಳ ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆಲುವಿನ ಬೆನ್ನು ಹತ್ತಿದ.ಯುವಕನಿಗೆ ಮುಂದೆ ಹೇಗೆ ಏನು ಎನ್ನುವ ಮಾಹಿತಿ ಇರಲಿಲ್ಲ, ಇವರ ಮನೆಯಲ್ಲಿ ಟಿವಿ ಯಾಗಲಿ, ಮೊಬೈಲ್ ಆಗಲಿ ಯಾವುದೆ ಸಂಪರ್ಕ ಮಾಧ್ಯಮ ಇರಲಿಲ್ಲ ಹಾಗೂ ಯಾವುದೆ ರೀತಿಯ ಮಾರ್ಗದರ್ಶನ ಮಾಡುವವರು ಕೂಡ ಇರಲಿಲ್ಲ.

ಮುಂದೆ ಕೆಲವರು ಇವನ ಸಾಧನೆಯನ್ನು ನೋಡಿ ಕೆಲವು ಜನರು ಮಾರ್ಗದರ್ಶನ ಮಾಡಿದ್ದರು. ನಿಮಗಾಗಿ ಅಂದರೆ ವಿಶೇಷ ಅಗತ್ಯ ಇರುವ ಕ್ರೀಡಾಪಟುಗಳಿಗಾಗಿ ವಿಶೇಷ ಸ್ಪರ್ಧೆಗಳು ಇರುತ್ತವೆ, ನಿನ್ನ ಹತ್ತಿರ ಗುರಿ ಇದೆ, ಛಲ ಇದೆ, ಹಾಗೆಯೇ ನೀನು ಉತ್ತಮ ಕ್ರೀಡಾಪಟು ಕೂಡ ಆಗಿದ್ದಿಯ, ಯಾಕೆ ನೀನು ತರಬೇತಿ ಪಡೆದು ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಬಾರದು?

ಎನ್ನುತ್ತ ಮಾರ್ಗದರ್ಶನ ನೀಡಿದರು. ಕೆಲವೇ ದಿನಗಳಲ್ಲಿ ರಾಷ್ಟ್ರಮಟ್ಟದ ಹಾಗೂ ಏಶಿಯನ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಅಚ್ಚರಿಯ ಸಾಧನೆ ಮಾಡಿದ. ಇವನ ಸಾಧನೆಗೆ ಮೆಚ್ಚಿ ಭಾರತದ ಅಗ್ರ ಕೋಚ್ ಗಳ ಸಾಲಿನಲ್ಲಿರುವ ಹೈ ಜಂಪ್ ಕೋಚ್ ಸತ್ಯನಾರಾಯಣ ಗರುಡಿಯಲ್ಲಿ ಹೈಜಂಪ್ ಕೋಚಿಂಗ್ ಪಡೆಯಲು ಆರಂಭಿಸಿದರು,

ಕಳೆದ ಬಾರಿ 2020 ಟೋಕಿಯೋ ಪ್ಯಾರಾ ಒಲಂಪಿಕ್ಸ್ ನಲ್ಲಿ ತನ್ನ ಅಚಲ ಆತ್ಮವಿಶ್ವಾಸ ಹಾಗೂ ಶ್ರದ್ದೆಯಿಂದ ಕಂanal ಪದಕ ಗೆದ್ದರು, 2022 ರ ಏಶಿಯನ್ ಪ್ಯಾರಾ ಒಲಂಪಿಕ್ನಲ್ಲಿ ಚಿನ್ನ ಗೆದ್ದರು. 2024 ರ ಪ್ಯಾರಿಸ್ ಪ್ಯಾರಾ ಒಲಂಪಿಕ್‌ನಲ್ಲಿ 2.06 ಟ ಎತ್ತರ ಜಿಗಿದು ಬೆಳ್ಳಿ ಪದಕ ಪಡೆದು, ತನ್ನ ಕನಸಿನ ಬಾವುಟ ಭಾರತದ ಬಾವುಟ ಗಗನದೆತ್ತರಕ್ಕೆ ಹಾರಿಸಿ ಶತ ಕೋಟಿ ಭಾರತೀಯರ ಪದಕದ ಕನಸನ್ನು ನನಸಾಗಿಸಿದ ಅತ್ಯಂತ ಕಿರಿಯ ವಯಸ್ಸಿನ ನಿಷಾದ ಕುಮಾರ್ ಇವರ ಸಾಧನೆ ಆಸಾಧಾರಣವಾಗಿದೆ. ಮೊದಲು ಗುರಿ ಇರಲಿ, ಆಮೇಲೆ ಗುರುವಿನ ದಯೆ ಇದ್ದೆ ಇರುತ್ತದೆ.

ಜೀವನದಲ್ಲಿ ಸಾಧನೆ ಮಾಡಲು ಎಲ್ಲ ಅನುಕೂಲತೆಗಳು ಬೇಕು ಅಂತೇನಿಲ್ಲ, ಯಾವುದಾದರು ಒಂದು ಕೊರತೆ ಇದ್ದೆ ಇರುತ್ತದೆ, ಹಾಗಂತ ನಾವು ಸುಮ್ಮನೆ ಜೀವನ ಮಾಡಿದರೆ ನಮಗೂ ಇತರೆ ಪ್ರಾಣಿಗಳಿಗೂ ಯಾವುದೆ ವ್ಯತ್ಯಾಸ ಇರುವುದಿಲ್ಲ.... ನಿಷಾದ್ ಕುಮಾರಗೆ ಕನಸಿತ್ತು, ಗುರಿ ಇತ್ತು, ಇನ್ನೂ ಚಿಕ್ಕ ವಯಸ್ಸು ಬೇಕಾದಷ್ಟು ಸಾಧನೆ ಮಾಡಬಹುದು.

ಪಾಲಕರಲ್ಲಿ ತಮ್ಮ ಮಗು ಡಾಕ್ಟರ್ ಇಂಜಿನಿಯರ್ ಆಗಬೇಕು ಎನ್ನುವ ಕನಸು ಇದೆ ಹೊರತು, ಆ ಮಗುವಿಗೆ ಓದುವದರ ಜೊತೆಗೆ ಮತ್ತೆ ಯಾವ ವಿಷಯದಲ್ಲಿ ಆಸಕ್ತಿ ಇದೆ ಎನ್ನುವುದನ್ನು ಪತ್ತೆ ಹಚ್ಚಬೇಕು, ಅದು ಯಾವ ಕ್ಷೇತ್ರ ಆದರೂ ಸರಿ ಆ ಮಗುವಿಗೆ ಪ್ರೋತ್ಸಾಹಿಸಿ, ಮಾರ್ಗದರ್ಶನ ನೀಡಿದರೆ, ಆ ಮಕ್ಕಳು, ಆ ಯುವಕರು ತನ್ನ ಹವ್ಯಾಸ, ತನ್ನ ಪ್ಯಾಶನ್ ಜೊತೆಗೆ ತನ್ನದೆ ಜೀವನ ಮಾಡಲು ಪಾಲಕರು ಅವಕಾಶ ಮಾಡಿಕೊಡಬೇಕು.

ಯಾವಾಗಲು ನಾವು ವೇತನ, ಉನ್ನತ್ತ ಹುದ್ದೆ ಇವುಗಳ ಬಗ್ಗೆ ಗಮನ ಕೊಡುತ್ತೇವೆ, ಆದರೆ ನಮಗೆ, ನಮ್ಮ ಮಕ್ಕಳಿಗೆ ಯಾವುದರಲ್ಲಿ ಆಸಕ್ತಿ ಇದೆ ಎನ್ನುವತ್ತ ಗಮನ ಕೊಡುವುದಿಲ್ಲ, ಈಗಲೂ ಅನೇಕ ಯುವಕರು ಓದಿದ್ದೆ ಒಂದು ಅವರು ಮಾಡುತ್ತಿರುವ ಕೆಲಸಗಳೆ ಒಂದು. ಕೇವಲ ಬದುಕಿಗೋಸ್ಕರ, ವೇತನಗೋಸ್ಕರ ಹುದ್ದೆಯ ಆಯ್ಕೆಗೆ ಗಮನ ಕೊಡದೆ. ನಮಗೆ ಇಷ್ಟ ಇರುವ ಹುದ್ದೆಗೆ ಮೊದಲ ಆಧ್ಯತೆ ಇರಲಿ. ಎಲ್ಲ ಕ್ಷೇತ್ರಗಳು ತನ್ನದೆ ಆದ ಮಹತ್ವ ಹೊಂದಿರುತ್ತವೆ ಸಾಧನೆ ಹಾಗೂ ಸಾಧಕ ಈ ಇಬ್ಬರ ಮೇಲೆ ಕ್ಷೇತ್ರಗಳ ಪ್ರಗತಿ ನಿರ್ಧಾರ ಮಾಡುತ್ತದೆ..... So pasinnat ಆಗಿ ಬದುಕಿ ಇದರಲ್ಲಿ ಆತ್ಮ ತೃಪ್ತಿ ಇದೆ.

# ಸ್ತ್ರೀ ಶಕ್ತಿಯ ಸಂಕೇತ 'ಗೂಮರ್' ಸಿನಿಮಾ

ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಸಿನಿಮಾ ಅತ್ಯಂತ ಜನಪ್ರಿಯ ಹಾಗೂ ಪ್ರಭಾವಿ ಸಮೂಹ ಮಾಧ್ಯಮ. ಇಂದು ಯಾರಿಗಾದರೂ ನೀವು ಎಷ್ಟು ಪುಸ್ತಕ ಓದಿದ್ದೀರಿ ಎಂಬ ಪ್ರಶ್ನೆ ಕೇಳಿದಾಗ ಸಿಗುವ ಉತ್ತರಕ್ಕಿಂತ ನೀವು ಎಷ್ಟು ಸಿನಿಮಾ ನೋಡಿದ್ದೀರಿ? ಎಂಬ ಪ್ರಶ್ನೆಗೆ ಸಿಗುವ ಉತ್ತರಖಂಡಿತ ಭಿನ್ನವಾಗಿರುತ್ತದೆ! ನಮ್ಮ ನಡುವೆ ಪುಸ್ತಕ ಓದದವರು ಸಾಕಷ್ಟು ಸಂಖ್ಯೆಯಲ್ಲಿ ಸಿಗಬಹುದೇನೋ, ಆದರೇ ಸಿನಿಮಾ ನೋಡದ ಕಣ್ಣುಗಳು ಸಿಗುವುದೇ ಇಲ್ಲ. ಪ್ರತಿಯೊಬ್ಬ ಮನುಷ್ಯನ ಆಸಕ್ತಿ ಮನೋರಂಜನೆ ಸಿನಿಮಾಆಗಿದೆ. ಹಾಗೆಂದ ಮಾತ್ರಕ್ಕೆ ಸಿನಿಮಾ ಹೆಚ್ಚು, ಸಾಹಿತ್ಯ ಕಡಿಮೆ ಎಂದೇನೂ ಅಲ್ಲ. ಆದರೆ ಓದುಗರಿಗಿಂತ ನೋಡುವವರ ಸಂಖ್ಯೆಯೇ ಹೆಚ್ಚಾಗಿರುವುದು ಇಂದಿನ ಸ್ಥಿತಿ. ಇದು ಸದ್ಯದ ಸಮಾಜಕ್ಕೆ ಹಿಡಿದ ಕನ್ನಡಿಯೂ ಹೌದು. ಮನೋರಂಜನೆಯನ್ನೇ ಮೂಲ ಬಂಡವಾಳ ವಾಗಿಟ್ಟುಕೊಂಡು ಸಿನಿಮಾ ಇಂದು ನಿಸ್ಸಂದೇಹವಾಗಿ ಅತ್ಯಂತ ಆಕರ್ಷಕ ಹಾಗೂ ಜನಪ್ರಿಯ ಮಾಧ್ಯಮ.

ಸಿನಿಮಾಗಳು ಸಮಾಜಕ್ಕೆ ಒಳ್ಳೆಯ ಬದಲಾವಣೆಯ ಸಂದೇಶವನ್ನು ಕೊಡುವಂತಹವು ಇರಬೇಕು ಈಗ ಆ ತರ ಸಿನಿಮಾಗಳು ಬರುವುದು ವಿರಳವಾಗಿದೆ. ಈಗ ಬಂದಿರುವಂತ ಸಿನಿಮಾಗಳಲ್ಲಿ ಹಿಂದಿ ಸಿನಿಮಾ ಒಂದು ಸಮಾಜಕ್ಕೆ ಒಳ್ಳೇಯ ಸಂದೇಶವನ್ನು ನೀಡುವಂತ ಸಿನಿಮಾ ವಾಗಿದೆ."ಗೂಮರ" ಎಂಬ ಹೆಸರಿನ ಹಿಂದಿ ಸಿನಿಮಾ ಮಹಿಳಾ ಪ್ರಧಾನವಾದ ಚಿತ್ರ. ಈ ಸಿನಿಮಾದಲ್ಲಿ ಮಹಿಳೆಯ ಕ್ರೀಡೆ ಬಗ್ಗೆಇದೆ, ಮಹಿಳೆ ಅಂಗ ವೈಕಲ್ಯ ಇದ್ದರು ಯಾವರೀತಿ ಜೀವನದಲ್ಲಿ ಗೆಲ್ಲಬೇಕು ಎಂಬ ಸಂದೇಶ ಇದೆ. ಮತ್ತೆ ಲಿಂಗ ಅಸಮಾನತೆಯಲ್ಲಿ ಇರುವಂತ ಟ್ರಾನ್ಸಜೆಂಡರ್‌ನ್ನು ಪ್ರಮುಖ ಪಾತ್ರದಲ್ಲಿ ತೋರಿಸಿದ್ದಾರೆ. ಈ ಸಿನಿಮಾ ಸ್ತ್ರೀ ಸಂವೇದನೆಗೆ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತದೆ.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ
Scan For Digital Colourful
HAMPI TIMES E-paper

ಹೋಪ್ ಫಿಲ್ಮ್ ಮೇಕರ್ಸ ಮತ್ತು ಸರಸ್ವತಿ ಎಂಟರಟೆನಮೆಂಟ್‌ನಲ್ಲಿ ಅಭಿಷೇಕ್ ಬಚನ್ ಪ್ರೊಡಕ್ಷನ್‌ನಲ್ಲಿ, ವಿಶಾಲ್‌ಸಿನ್ಹ ನಿರ್ದೇಶನದಲ್ಲಿ ಮೂಡಿ ಬಂದಂತಹ ಗೂಮರ್ ಸಿನಿಮಾ ಅನಿನಾ ಎಂಬ ಹುಡುಗಿಯ ಸುತ್ತ ಹೆಣದಿರುವಂತ ಕಥೆ. ಆಧುನಿಕ ಸಿನಿಮಾದಲ್ಲಿ ಲಿಂಗ ಪಾತ್ರಗಳನ್ನು ಸ್ಥಿರಮಾದರಿಯಲ್ಲಿ ತೋರಿಸದೆ ವಿಭಿನ್ನವಾಗಿ ಪಾತ್ರಗಳ ನಿರ್ವಹಣೆ ಸಿನಿಮಾದಲ್ಲಿ ಮೂಡಿ ಬಂದಿದೆ. ಅನಿನಾ ಕ್ರಿಕೆಟ್ ಆಟಗಾರ್ತಿ, ಮತ್ತು ಒಳ್ಳೆಯ ಬ್ಯಾಟರ್. ಅವಳು ಇಂಡಿಯನ್ ಟಿಮ್‌ಗೆ ಆಯ್ಕೆ ಆಗಿರುತ್ತಾಳೆ, ಅದೇ ಸಂತೋಷದಲ್ಲಿ ಇರುವಾಗ ಒಬ್ಬ ಹಳೆಯ ಆಟಗಾರ ಅವಳನ್ನು ಅವಮಾನಿಸುತ್ತಾನೆ ಅದೇ ದುಃಖದಲ್ಲಿ ಮನೆಗೆ ತೆರಳುವಾಗ ಕಾರ್ ಅಪಘಾತದಲ್ಲಿ ಅವಳು ಬಲಗೈ ಕಳೆದುಕೊಳ್ಳುತ್ತಾಳೆ. ಅದಕ್ಕೆ ಆ ಹಳೆಯ ಆಟಗಾರನೇ ಕಾರಣಕರ್ತನಾಗಿರುತ್ತಾನೆ. ಕೈ ಕಳೆದುಕೊಂಡ ಅನಿನಾ ಸಾಯಲು ಸಿದ್ಧವಾಗುತ್ತಾಳೆ ಆದರೆ ಅವಳ ಕುಟುಂಬ ತುಂಬಾ ಪ್ರೀತಿಯಿಂದ ನೋಡಿಕೊಳ್ಳತ್ತಿರುತ್ತಾರೆ ಅದೇರೀತಿ ಅವಳ ಆಟಕ್ಕೆ ಬೆಂಬಲ ಇರುತ್ತದೆ. ಮಾನಸಿಕವಾಗಿ ಗುಗ್ಗದಂತೆ ಅವಳನ್ನು ನೋಡಿಕೊಳ್ಳತ್ತಿರುತ್ತಾರೆ.

ಅನಿನಾ ಕೈ ಕಳೆದುಕೊಳ್ಳಲು ಕಾರಣರಾದ ಹಳೆಯ ಕ್ರಿಕೆಟ್ ಆಟಗಾರ ಅವಳನ್ನು ಮಾನಸಿಕವಾಗಿ ಧೈರ್ಯತುಂಬಿ ಅವಳನ್ನು ಒಳ್ಳೆಯ ಬಾಲರ್ ಆಗಿ ಪರಿವರ್ತಿಸುತ್ತಾನೆ. ಅದು ಒಂದೇ ಕೈಯಿಂದ ಆಡುವ ಹಾಗೆ ತರಬೇತಿ ನೀಡಿ ಅವಳು ಇಂಡಿಯನ್ ಟೀಂಗೆ ಆಯ್ಕೆ ಆಗುವಂತೆ ತರಬೇತಿ ನೀಡುತ್ತಾನೆ. ಒಂದೇ ಕೈಯಲ್ಲಿ ಆಡುವಂತ ಆತ್ಮಸ್ಥೈರ್ಯ, ಕುಟುಂಬದಿಂದ ಸ್ಫೂರ್ತಿ ಮನೋಬಲ ನೀಡಿದಕಾರಣ ಅವಳು ಗೆಲ್ಲುವಂತೆ ಮಾಡುತ್ತದೆ. ಈ ಸಿನಿಮಾದ ಸಂದೇಶ ಸಮಾಜ್ಕೆ ಅರ್ಥವಾಗಬೇಕಾಗಿರುವುದು ಹೆಣ್ಣು ಅಂಗ ವೈಕಲ್ಯ ಇದ್ದರು ಅದರಿಂದಕುಗ್ಗದೆ, ದೈಹಿಕವಾಗಿ ಅವಳು ಸಧೃಡಳು ಅದನ್ನು ಹೊರತೆಗೆಯಲು ಅವಳ ಸುತ್ತಧನತ್ಮವಾಗಿ ಇರುವಂತ ಜನರು ಇದ್ದು ಅವಳಿಗೆ ಬೆಂಬಲ ನೀಡಿದರೆ ಅವಳನ್ನು ಜಗತ್ತನ್ನೇ ಗೆಲ್ಲಬಲ್ಲಳು ಎನ್ನುವ ಸಂದೇಶ ಎಲ್ಲಾರು ಮನವರಿಕೆ ಮಾಡಿಕೊಳ್ಳಬೇಕು. ಹೆಣ್ಣು ಮನಸ್ಸು ಮಾಡಿದರೆ ಏನಾದರು ಸಾಧನೆ ಮಾಡಬಲ್ಲಳು ಅವಳು ದುರ್ಬಲಳು ಅಲ್ಲಎಂದು ಸಿನಿಮಾದಲ್ಲಿ ಎದ್ದು ಕಾಣುತ್ತಿದೆ.

ಈ ಸಿನಿಮಾದಲ್ಲಿ ಇನ್ನೋಂದು ಮುಖ್ಯವಾದ ಪಾತ್ರವೆಂದರೆ ರಚಿಕಾ ಎಂಬ ಟ್ರಾನ್ಸಜೆಂಡರ್ ಪಾತ್ರ ಅದು ಅಭಿಷೇಕ್ ಬಚ್ಚನ್ ಅವರಿಗೆ ತಂಗಿಯ ಪಾತ್ರ. ಲಿಂಗ ಅಸಮಾನತೆ ಇರುವವರು ಒಂದು ಒಳ್ಳೆಯ ಪಾತ್ರ ಮಾಡಬಹುದು ಎಂದು ನಮ್ಮ ಸಮಾಜಕ್ಕೆ ಕೊಡುವ ಒಳ್ಳೇಯ ಸಂದೇಶ.ಟ್ರಾನ್ಸಜೆಂಡರ್ ಜೀವನಚರಿತ್ರೆ ಸಂಬಂಧ ಪಟ್ಟಂತೆ ಹಲವಾರು ಸಿನಿಮಾಗಳು ಬಂದಿವೆ ಆದರೆ ಈ ಸಿನಿಮಾದಲ್ಲಿ ವಿಶೇಷ ವ್ಯಕ್ತಿಯ ಜೊತೆ ತಂಗಿ ಸಂಬಂಧದಲ್ಲಿ ನಟಿಸಿರುವುದು ಶ್ಲಾಘನಿಯ. ಈ ಸಿನಿಮಾದ ಇನ್ನೋಂದು ಮುಖ್ಯವಾದ ಸಂದೇಶ ಕುಡಿದ ನಶೇಯಲ್ಲಿ ವಾಹನ ಚಾಲನೆ ಮಾಡಬಾರದು, ಮಾಡಿದಾರೆ ಅದರಿಂದ ಆಗುವಂತ ಅನಾಹುತ ಏನು ಎಂದು ಈ ಸಿನಿಮಾದಲ್ಲಿ ತೋರಿಸಾಲಿಗಿದೆ.ಇದರಿಂದ ಒಳ್ಳೆಯ ಆಟಾಗಾರರ್ತಿ ಅನಿನಾ ಕೈ ಕಳೆದುಳ್ಳುತ್ತಾಳೆ. ಅನಿನಾ ಅಜ್ಜಿಯ ಪಾತ್ರನು ಮುಖ್ಯವಾಗುತ್ತದೆ. ಅವಳ ಅಜ್ಜಿಕ್ರಿಕೆಟ್ ಆಡಲು ತಾಯಿಯ ಸ್ಥಾನದಲ್ಲಿ ನಿಂತು ಬೆಂಬಲ ನೀಡುತ್ತಾರೆ. ಎಲ್ಲಕ್ಕಿಂತ ಕುಟುಂಬದ ಬೆಂಬಲ ಇಲ್ಲಿ ಮುಖ್ಯವಾಗುತ್ತದೆ.

ಒಟ್ಟಿನಲ್ಲಿ ಈ ಸಿನಿಮಾದ ಉದ್ದೇಶವು ಮಹಿಳೆಯನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ದೈಹಿಕವಾಗಿ ಸಧೃಡರನ್ನಾಗಿ ಮಾಡಲು ಮತ್ತು ಪುರುಷ ಪ್ರಧಾನ ಸಮಾಜದ ವಿರುದ್ಧ ಹೋರಾಡುವ ಮನೋಸ್ಥೈರ್ಯ ಹೊಂದಿರುವ ಮಹಿಳೆಯನ್ನು ಎಲ್ಲಾ ರೀತಿಯಿಂದಲೂ ಮುನ್ನಲೆಗೆ ತರುವ ಅವಿರತ ಪ್ರಯತ್ನವನ್ನು ಮಾಡಿದ್ದಾರೆ.



## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**10–10–2024 – ಗುರುವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ಅತಿಗಂಡ |
| ಕರಣ | : ವಾಣಿಜ |
| ಸೂರ್ಯೋದಯ | : 06:22:59 |
| ಸೂರ್ಯಾಸ್ತ | : 18:04:16 |
| ರಾಹು ಕಾಲ | : 13:41–15:09 |
| ಯಮಘಂಡ ಕಾಲ | : 06:32–07:51 |
| ಗುಳಿಕ ಕಾಲ | : 09:18–10:46 |

## ತುಂಗಭದ್ರಾ ನೀರಿನ ಮಟ್ಟ




ಬುಧವಾರ : 09–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10993 ಕ್ಯುಸೆಕ್ |
| ಹೊರ ಹರಿವು | 10573 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1616.01 ಅಡಿ |
| ಒಳ ಹರಿವು | 2022 ಕ್ಯುಸೆಕ್ |
| ಹೊರ ಹರಿವು | 9435 ಕ್ಯುಸೆಕ್ |
| ಸಾಮರ್ಥ್ಯ | 50.46 ಟಿಎಂಸಿ |

# ಹಂಪಿಯಲ್ಲಿ ಶಕ್ತಿ ದೇವತೆಗಳ ಆರಾಧನೆ

## ಆದಿಶಕ್ತಿ ದುರ್ಗಾದೇವಿ



ಯಾ ದೇವಿ ಸರ್ವಭೂತೇಷು, ಶಕ್ತಿರೂಪೇಣ, ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ. ದಸರಾ ಹಬ್ಬದ ಆಚರಣೆ ನಾಡಿನ ತುಂಬ ಅತ್ಯಂತ ಭಕ್ತಿ ಸಡಗರ ಸಂಭ್ರಮದಿಂದ ನಡೆಯುತ್ತಿದೆ. ಏಳು ದಿನಗಳ ಕಾಲ ದೇವತೆಯ ವಿವಿಧ ಅವತಾರಗಳನ್ನು ಜನ ಪೂಜಿಸಿದ್ದಾರೆ. ದಸರೆಯ ಇಂದಿನ ಎಂಟನೇ ದಿನವನ್ನು ದುರ್ಗಾಷ್ಟಮಿ ಎಂದು ಆಚರಿಸಲಾಗುತ್ತದೆ.

ಈ ದಿನ ದುರ್ಗಾದೇವಿಯ ಎಂಟನೇ ರೂಪವಾದ ಮಹಾ ಗೌರಿಯನ್ನು ಸಹ ಪೂಜಿಸಿಕೊಂಡು ಬರಲಾಗುತ್ತಿದೆ. ನವರಾತ್ರಿಯ ಅಷ್ಟಮಿ ಮತ್ತು ಕೊನೆಯ ದಿನ ನವಮಿ ದಿನಗಳು ಅತ್ಯಂತ ಶ್ರೇಷ್ಠವಾದವು ಎಂಬ ನಂಬಿಕೆ.


ಅಷ್ಟಮಿಯ ತಿಥಿಯೆಂದು ದುರ್ಗಾದೇವಿಯು ಚಂಡ ಮುಂಡರೆಂಬ ರಾಕ್ಷಸರನ್ನು ಸಂಹಾರಮಾಡಿದಳು. ನವಮಿಯೆಂದು ದೇವಿಯು ಮಹಿಷಾಸುರನನ್ನು ಕೊಂದು ಜನರನ್ನು ರಕ್ಷಿಸಿದಳು ಎಂದು ನಂಬಿಕೊಂಡು ಬಂದಿದ್ದಾರೆ. ಹೀಗಾಗಿ ಅಷ್ಟಮಿ ಮತ್ತು ನವಮಿ ಪೂಜೆಗಳು ಅತ್ಯಂತ ಮಹತ್ವವನ್ನು ಪಡೆದುಕೊಂಡಿವೆ. ಕೆಲ ಭಾಗಗಳಲ್ಲಿ ಅಷ್ಟಮಿ ದಿವಸ 9 ಮಣ್ಣಿನ ಮಡಿಕೆಗಳನ್ನು ಇಟ್ಟು ಅವುಗಳಲ್ಲಿ ದುರ್ಗಾದೇವಿಯನ್ನು ಆಹ್ವಾನಿಸಿ ಪೂಜೆಯನ್ನು ಮಾಡಲಾಗುವ ಪದ್ಧತಿ ಇದೆ. ಇನ್ನೂ ಕೆಲವು ಕಡೆ ಎರಡರಿಂದ ಹತ್ತು ವರ್ಷದ ಒಳಗಿನ ಹೆಣ್ಣು ಮಕ್ಕಳನ್ನು ದುರ್ಗಾದೇವಿಯೆಂದು ಭಾವಿಸಿ ಪೂಜಿಸಲಾಗುತ್ತಿದೆ. ಹಾಗೂ ಸಂಧಿ ಪೂಜೆ, ಕನ್ಯಾ ಪೂಜೆ ಎಂದು ಒಂದೊಂದು ಭಾಗದಲ್ಲಿ ಹಾಗೂ ಒಂದೊಂದು ಗ್ರಾಮದಲ್ಲಿ ಒಂದೊಂದು ರೀತಿಯ ಪೂಜೆ, ಪರಂಪರೆಗಳು ಈ ದಸರೇ ಸಂದರ್ಭದಲ್ಲಿ ನಡೆಯುತ್ತವೆ. ತಮ್ಮ ಗ್ರಾಮದ ಪರಂಪರೆಯಂತೆ ದೇವಿಯ ಆರಾಧನೆಯನ್ನು ಜನರು ಮಾಡಿಕೊಂಡು ಬಂದಿದ್ದಾರೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ವಿಜಯನಗರದ ರಾಜಧಾನಿ ಹಂಪಿಯಲ್ಲಿ ದಸರಾ ಉತ್ಸವ ಅತ್ಯಂತ ವಿಜೃಂಭಣೆಯಿಂದ ಹಾಗೂ ವೈಭೋವೊಪೇತವಾಗಿ ನಡೆಯುತ್ತಿತ್ತು ಎಂಬುದನ್ನ ಆಗ ಹಂಪಿಗೆ ಭೇಟಿ ಕೊಟ್ಟ ವಿದೇಶಿ ಪ್ರವಾಸಿಗರ ಬರಹಗಳು ಹಾಗೂ ಹಂಪಿಯಲ್ಲಿರುವ



ಸ್ಮಾರಕಗಳು ಸಾಕ್ಷಿಯಾಗಿವೆ. ವಿಜಯನಗರದ ಸಾಮಂತರು, ಮಾಂಡಲಿಕರು, ಮೊದಲಾದವರು ರಾಜಧಾನಿ ಹಂಪಿಗೆ ತಮ್ಮ ದಂಡು ದರ್ಬಾರ ಹಾಗೂ ಕಪ್ಪ ಕಾಣಿಕೆಗಳೊಂದಿಗೆ ಬಂದು ಈ ಉತ್ಸವದಲ್ಲಿ ಪಾಲ್ಗೊಂಡು ಅವುಗಳನ್ನು ರಾಜನಿಗೆ ಅರ್ಪಿಸಿ ಹೋಗುತ್ತಿದ್ದರು. ಮಹಾನವಮಿ ದಿಬ್ಬದಲ್ಲಿ ಈ ಉತ್ಸವ ನಡೆಯುತ್ತಿತ್ತು. ಹಂಪೆಯಲ್ಲಿ ಶಕ್ತಿ ದೇವತೆಗಳಾದ ಹಂಪಮ್ಮ, ಭುವನೇಶ್ವರಿ, ದುರ್ಗಾದೇವಿ, ಪಟ್ಟಣದ ಎಲ್ಲಮ್ಮ, ಹತ್ತು ಕೈಯಮ್ಮ, ಪಂಪಾ ಸರೋವರದ ಜಯಲಕ್ಷ್ಮೀ ಹೀಗೆ ದೇವತೆಗಳ ಆರಾಧನೆ ನಡೆಯುತ್ತಿತ್ತು. ಇದೇ ರೀತಿಯಲ್ಲಿ ಆನೆಗುಂದಿಯಲ್ಲಿಯು ಶಕ್ತಿ ದೇವತೆಯಾದ ದುರ್ಗಾದೇವಿಯ ಆಚರಣೆ ನಡೆಯುತ್ತಿತ್ತು.

ವಿಜಯನಗರ ಸಾಮ್ರಾಜ್ಯದ ಆನೆಗುಂದಿ ಅರಸರ ಕಾಲಘಟ್ಟದಲ್ಲಿಯು ದಸರಾ ಆಚರಣೆ ನಡೆಯುತ್ತಿತ್ತು. ದುರ್ಗಾದೇವಿ ಆರಾಧನೆ ವಿಶೇಷವಾಗಿ ನಡೆಯುತ್ತಿತ್ತು ಎಂಬುದಕ್ಕೆ ಆನೆಗುಂದಿಯ ದುರ್ಗಾದೇವಿಯ ಬೆಟ್ಟ ಸಾಕ್ಷಿಯಾಗಿದೆ. ಬೆಟ್ಟದಲ್ಲಿರುವ ದುರ್ಗಾದೇವಿಯು ಆನೆಗುಂದಿ ರಾಜರ ಮನೆ ದೇವತೆಯು ಆಗಿದ್ದಳು. ನವರಾತ್ರಿಯ ಆರಾಧನೆಯ ಸಂದರ್ಭದಲ್ಲಿ ದೇವಿಗೆ ಕೋಣಗಳನ್ನು ಬಲಿ ಕೊಡುವ ಮೂಲಕ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರಂತೆ.

ವಿಜಯನಗರ ಕಾಲಘಟ್ಟದಲ್ಲಿ ಅನ್ಯ ರಾಜರುಗಳಿಂದ ದಾಳಿ ಆಗಬಹುದೆಂಬ ಭಯದಿಂದ ಸಾಮ್ರಾಜ್ಯದ ಸಂಪತ್ತನ್ನು ಈ ದುರ್ಗಾದೇವಿ ಬೆಟ್ಟದಲ್ಲಿ ಗೌಪ್ಯವಾಗಿ ಕೂಡಿಡಲಾಗಿತ್ತು ಎಂದು ನಂಬಲಾಗಿದೆ. ಈ ಬೆಟ್ಟದಲ್ಲಿ ಸಂಪತ್ತನ್ನು ಕೂಡಿ ಇಟ್ಟಿದ್ದರಿಂದ ಇದಕ್ಕೆ ಗಟ್ಟಿ ಕೋಟೆ ಎಂಬ ಹೆಸರಿನಿಂದಲು ಸಹ ಕರೆಯುತ್ತಾರೆ. ಈ ಬೆಟ್ಟದಲ್ಲಿ ಈಗಲೂ ಸಹ ದುರ್ಗಾದೇವಿಯ ನವರಾತ್ರಿ ಆಚರಣೆ ಅತ್ಯಂತ ಶ್ರದ್ಧೆ ಭಕ್ತಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

## ಮೈಕ್ರೋ ನ್ಯೂಸ್

### ಕಾರ್ಯಾಚರಣೆ ನಡೆಸಿ 22 ಪ್ರಕರಣ ದಾಖಲು

**ಹಂಪಿ ಟೈಮ್ಸ್ ಹೊಸಪೇಟೆ**

ತಂಬಾಕು ಮುಕ್ತ ಯುವ ಅಭಿಯಾನ 2.0 ಅಡಿಯಲ್ಲಿ ಸೋಮವಾರ ಆರೋಗ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಕಾರ್ಯಚರಣೆ ನಡೆಸಿ ಪ್ರಕರಣ ದಾಖಲಿಸಿದರು. ಚಿತ್ತವಾಡಗಿ ಪೊಲೀಸ್ ಠಾಣೆ ಕಾರ್ಯಾಚರಣೆ 2003ರ ಉಲ್ಲಂಘನೆ ವಿರುದ್ಧ ಪ್ರಕರಣ ದಾಖಲಿಸಿದರು. ಕೋಪ್ಟ ಕಾಯ್ದೆ 2003ರ ಉಲ್ಲಂಘನೆ ಅಡಿಯಲ್ಲಿ ಸೆಕ್ಷನ್ 4 ಕಾಯ್ದೆಯ ಅಡಿ 10 ಪ್ರಕರಣ ದಾಖಲಿಸಿ ರೂ 1900 ದಂಡ, 6 ಕಾಯ್ದೆಯ ಅಡಿ 2 ಪ್ರಕರಣ ದಾಖಲಿಸಿ ರೂ 400 ದಂಡ, ಸೆಕ್ಷನ್ 6ಬಿ ಕಾಯ್ದೆಯ ಅಡಿ 4 ಪ್ರಕರಣ ದಾಖಲಿಸಿ ರೂ 800 ದಂಡ, ಸೆಕ್ಷನ್4 ರ ಅಡಿ 06 ಪ್ರಕರಣ ದಾಖಲಿಸಿ ರೂ 900 ದಂಡ ಸೇರಿದಂತೆ ಒಟ್ಟು 22 ಪ್ರಕರಣ ದಾಖಲಿಸಿ 4000 ರೂಪಾಯಿ ದಂಡ ವಿಧಿಸಲಾಯಿತು. ಪೊಲೀಸ್ ಇಲಾಖೆಯ ಎಎಸ್ಐ ಚೌಡಪ್ಪ, ಸಿಪಿಸಿ ನಾಗರಾಜ ನಾಯಕ್, ಸಂತೋಷ್ ಹಾಗೂ ಆರೋಗ್ಯ ಇಲಾಖೆ ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಭೋಜರಾಜ ಭಾಗವಹಿಸಿದ್ದರು.

## ಎಸ್ ಎಸ್ ಎಲ್ ಸಿ ಪ್ರಶ್ನೋತ್ತರಗಳ ಸರಣಿಗೆ ವಿದ್ಯಾರ್ಥಿಗಳ ಅನಿಸಿಕೆಗಳು

### ಓದಲು ಹೊಸ ಹುಮ್ಮಸ್ಸು ನೀಡಿದೆ



**ಹಂಪಿ ಟೈಮ್ಸ್** ಪತ್ರಿಕೆಯಲ್ಲಿ **'ಈಗಿಂದಲೇ ಅಭ್ಯಾಸ ಮಾಡಿ'** ಎಂಬ ಈ ವಾಕ್ಯ ನನಗೆ ಸ್ಫೂರ್ತಿದಾಯಕ ವಾಕ್ಯವಾಗಿದೆ. ಪ್ರತಿನಿತ್ಯ ಪ್ರಕಟಿಸುತ್ತಿರುವ ಎಸ್ಸೆಸ್ಸೆಲ್ಸಿ ಪ್ರಶ್ನೋತ್ತರಗಳನ್ನು ಓದಲು ಹೊಸ ಹುಮ್ಮಸ್ಸು ಬರುತ್ತಿದೆ. ಪತ್ರಿಕೆಯ ಆಗಮನದ ಹಾದಿಯನ್ನೆ ನಿತ್ಯ ಕಾಯುತ್ತಿದ್ದೇನೆ. ಪತ್ರಿಕೆಯಲ್ಲಿ ಪರೀಕ್ಷೆಗೆ ಬರಬಹುದಾದ ಸಂಭವನೀಯ ಪ್ರಶ್ನೋತ್ತರಗಳನ್ನು ನಿರಂತರ ಅಭ್ಯಾಸ ಮಾಡಿದ್ದರಿಂದ ಅರ್ಧವಾರ್ಷಿಕ ಪರೀಕ್ಷೆ ಬರೆಯಲು ಹೆಚ್ಚು ಅನುಕೂಲವಾಗಿದೆ. ಹಂಪಿ ಟೈಮ್ಸ್ ಪತ್ರಿಕೆಗೆ ಮತ್ತು ಮಾರ್ಗದರ್ಶಿ ಶಿಕ್ಷಕರ ತಂಡಕ್ಕೆ ಧನ್ಯವಾದಗಳು.

**– ಕೌಸರ್, 10ನೇ ತರಗತಿ**
ಸರ್ಕಾರಿ ಪ್ರೌಢಶಾಲೆ, ಬಸರಕೋಡು.

**ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ನಿಮ್ಮ ಅಭಿಪ್ರಾಯಗಳನ್ನು ಭಾವಚಿತ್ರದೊಂದಿಗೆ ಕಳುಹಿಸಬಹುದು.**
M: 9448633038 - Email: hampitimes@gmail.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

### Unit -2 Check your learning progress

**(Write the answers in your notebook and practice)**
**"There's a Girl by the Tracks"!**

**I. Answer the following questions in two or three sentences each:**

1. How did Roma fall by the tracks?
2. There was no response and no help in Roma's sight. Why was it so?
3. How did Baleshwar manage to reach the road?
4. Who volunteered to help Baleshwar? How did he help him?
5. How did the doctors at Divine Multi Specialty Hospital treat Roma?
6. Why did Baleshwar revisit the spot where Roma had fallen?
7. Why were the people of Mumbai afraid of, according to Baleshwar? Why had he this opinion?
8. Give some personal details about Roma Talreja.
9. Give some personal details about Baleshwar Mishra.
10. After Roma's recovery, what did she say about Baleshwar?
11. Baleshwar had a good memory. Do you agree with this? Give examples to support your view.

**I. Read the following extracts and answer the questions that follow:-**

1. "There is a girl by the tracks!" the voices cried out.
a. Who is the girl mentioned here?
b. Whose voices were these?
c. Why did the voices cry out?
2. "Let's go and help her."
a. Who shouted like this?
b. What happened there?
c. Why did not the speaker get help?
3. "I hope I'm not too late."
a. Who is the 'I' here?
b. Where was he not late to?
c. What hope did he have?
4 . "Behanji ,aap theek hai?" he asked .But there was no response, and no help in sight.
a. Who does 'behanji' refer to here?
b. Why was there no response?
c. Where was she?
5. "My sister is injured, Please help me take her to a hospital."But no one stopped.
a. Who does 'sister' refer to here?
b.Who requested like this to whom?
c. Why was she taken to a hospital? What had happened to her?
6. "Take the girl to Airoli," suggested the cop, "there's a hospital there."But Baleshwar disagreed.
a. Who is the 'girl' here?
b. What had happened to her?
c. Why did Baleshwar disagree?
7. "What's your name? Whom can I call?"
A) Who asked this question to whom?
b. Where was she?
c. Do you think these questions were relevanat that time? Why?
8. "Chacha, can I borrow your mobile?"
a. Who wanted the mobile?
b.Who did he want to borrow from?
c. Why did he want the mobile?
9. "Oh ,I couldn't thank him," Baleshwar thought."
A) Who do the words I and him refer to here?
B) Why should he thank him?
C) Why couldn't he thank him
10. "I can't imagine what would have happened if Baleshwar hadn't been there."
a. Who does 'I' refer to here?
b. Why was Baleshwar there?
c. What would have happened if Baleshwar Mishra had not been there?
11. "I think it's astonishing that a stranger would jump off a train and risk his life for me. I can never repay Baleshwar."
a. Who is the stranger here?
b. What was astonishing for the speaker?
.C . Why couldn't she repay him?

**|||. Quote from the memory**

It is enthroned in the..........
...............................................
...............................................
........................mercy seasons Justice.

NARAYANPUR INCIDENT
Shashi Deshapande

**I .Answer the following questions in 2-3 sentences each.**


1. Why had the students been marching? How was it an unusual march?
2. Can you guess what the police officer had been talking to the students'leaders?
3. Babu and Manju were a bit disappointed with the way students were marching. What was the reason?
4 . What had the police expected about the way of protest? How did student leaders manage the protest?
5. What was there in the mysterious parcel? What suspicion did the police have about that?
6. Why had Patil, the sub – inspector come to Mohan's house? Who believed him? What was the result?

www.hampitimes.com - Hampi Times Margadarshi

Prepared by **Guru Hiremath**, English language teacher S. G. S. High School, Kadalabalu, Hagaribommanahalli

ಸಹಕಾರ:–
ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ನವಗ್ರಹ



ಬ್ರಹ್ಮಾಂಡದಲ್ಲಿ ಅಸಂಖ್ಯಾ ತಾರಾ ಮಂಡಲಗಳು ನಿಹಾರಿಕೆಗಳು ತುಂಬಿವೆ. ಮನಸ್ಸಿನಲ್ಲಿ ಕಲ್ಪಿಸಲು ಆಗದಂತಹ ಅಗಾಧ ಗಾತ್ರದ ಕಾಯಗಳಿವೆ. ಈ ಅಗಾಧ ವಿಶ್ವದಲ್ಲಿ ಕ್ಷೀರ ಪಥವೆಂಬ ನಿಹಾರಿಕೆಯಲ್ಲಿ ಸೂರ್ಯ ಒಂದು ಸಾಮಾನ್ಯ ನಕ್ಷತ್ರವಾಗಿ ತನ್ನ ಬಳಗದ ಗ್ರಹಗಳೊಂದಿಗೆ ನಿಹಾರಿಕೆಯ ಕೇಂದ್ರ ಮಂಡಲವನ್ನು ಸುತ್ತಿ ಬರುತ್ತಿದ್ದಾನೆ.

ಸೂರ್ಯ ತನ್ನ ಬಳಗ ಸೌರವ್ಯೂಹವೆಂಬ ನವಗ್ರಹಗಳ ಒಕ್ಕೂಟದೊಂದಿಗೆ ಅಗಾಧ ವೇಗದಲ್ಲಿ ಅಂತರಿಕ್ಷದಲ್ಲಿ ಚಲಿಸುತ್ತಿದ್ದಾನೆ.ಈ ನವಗ್ರಹಗಳು ಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ ಗುರು, ಶನಿ, ಯುರೇನಸ್, ನೆಪ್ಚೂನ್ ಪ್ಲುಟೊ. ನವಗ್ರಹಗಳ ಉಲ್ಲೇಖ ಪುರಾಣ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಇದೆ. ಇದರ ಪ್ರಕಾರ ಸೂರ್ಯ ಚಂದ್ರರೂ ಗ್ರಹಗಳೇ,ಆದರೆ ಆಧುನಿಕ ವಿಜ್ಞಾನ ಹಾಗೂ ಖಗೋಳ ಶಾಸ್ತ್ರದ ಪ್ರಕಾರ ಜ್ವಲಿಸುತ್ತಿರುವ ಅನಿಲ ಗೋಳವಾದ ಸೂರ್ಯ ನಕ್ಷತ್ರವಾಗಿ ಉಳಿದಲ್ಲಿ, ಗ್ರಹಗಳು ಆತನ ಸುತ್ತ ತಮ್ಮದೇ ಪಥದಲ್ಲಿ ಸುತ್ತಿ ಬರುತ್ತಿದೆ. ಬುಧ, ಶುಕ್ರರು ಸೂರ್ಯನ ಸಮೀಪವೇ ಇದ್ದರೂ ಜೀವಿಗಳಿಗೆ ಬೇಕಾದ ವಾತಾವರಣ ಹೊಂದಿಲ್ಲ. ಸದ್ಯಕ್ಕೆ ನಮ್ಮ ಖಗೋಳ ಜ್ಞಾನದ ವಿಸ್ತರಣೆಯಿಂದ ಭೂಮಿಯನ್ನು ಬಿಟ್ಟರೆ ಬೇರಾವ ಗ್ರಹಗಳಲ್ಲೂ ಜೀವಿಗಳಿಲ್ಲ ಆ ನಿಟ್ಟಿನಲ್ಲಿ ನಾವು ಒಂಟಿಯೇ.

ಇನ್ನು ಮಂಗಳ ಭೂಮಿಯನ್ನು ಹೋಲಿದರೂ ಜೀವಿಗಳಿಲ್ಲದ ಶುಷ್ಕ ಪ್ರದೇಶ ಉಳಿದ ಗ್ರಹಗಳು ಭಾರಿ ಗ್ರಹಗಳಾಗಿವೆ. ಗುರು ಗ್ರಹ ಹೆಸರಿಗೆ ತಕ್ಕ ಹಾಗೆ ಭಾಗಿಯಾಗಿದೆ. ಆದರೆ ಇವುಗಳು ಉರಿಯದ ಅನಿಲ ಗೋಳಗಳು ಮೀಥೇನ್ ಹೈಡ್ರೋಜನ್ ನಂತಹ ಅನಿಲಗಳಿಂದಲೇ ಸುತ್ತುವರೆದಿದೆ ಇದರಲ್ಲಿ ವಾತಾವರಣ ವಿಷಗುಳಿಯಿಂದ ತುಂಬಿದೆ. ಶನಿ ಗ್ರಹವು ಉಂಗುರವನ್ನು ಹೊಂದಿದ್ದು ಕ್ಷುದ್ರ ಗ್ರಹಗಳಿಂದ ಸುತ್ತುವರೆದಿದೆ.ಯುರೇನಸ್ ನೆಪ್ಚೂನ್ ಗ್ರಹಗಳು ಗುರು ಹಾಗೂ ಶನಿ ಗ್ರಹಗಳಂತೆ ಅನಿಲ ಗೋಳಗಳಾಗಿವೆ ಒಂದು ತರನಾದ ಶುಷ್ಕ ಗ್ರಹವಾಗಿ ಗಟ್ಟಿ ನೆಲವನ್ನು ಹೊಂದಿದ್ದರೂ ಇದನ್ನು ಸೂರ್ಯನ ಬಳಗಕ್ಕೆ ಸೇರಿಸಬೇಕೇ ಬೇಡವೇ ಎಂಬ ಜಿಜ್ಞಾಸೆ ಖಗೋಳತಜ್ಞರ ವಲಯದಲ್ಲಿ ಇದ್ದೇ ಇದೆ.ಒಟ್ಟಿನಲ್ಲಿ ನವಗ್ರಹಗಳೂ ಸೂರ್ಯನೊಂದಿಗೆ ತಮ್ಮ ಹಲವು ಹತ್ತು ಉಪಗ್ರಹಗಳ ಸಮೇತ ಸೌರವ್ಯೂಹವಾಗಿ ತಮ್ಮದೇ ಬಳಗದೊಂದಿಗೆ ಅಂತರಿಕ್ಷದಲ್ಲಿ ಸುತ್ತುತ್ತಿದೆ.

ಆದರೆ ವಿಶಾಲ ವಿಶ್ವದ ಅಗಾಧ ಅರವಿನಲ್ಲಿ ಸೌರವ್ಯೂಹದ ನವಗ್ರಹಗಳ ಕೊನೆಗೆ ಸೂರ್ಯನಂತಹ ನಕ್ಷತ್ರದ ಔಚಿತ್ಯವೂ ಬಹಳ ಅಲ್ಪ.ಆದ ಕಾರಣ ನಮಗೆ ದಕ್ಕಿರುವ ಈ ಜನ್ಮದಲ್ಲಿ ವಿಶ್ವದ ಅಗಾಧತೆಗೆ ಬೆರಗಾಗಿ ಸೃಷ್ಟಿಕರ್ತನಲ್ಲಿ ಶರಣಾಗುವುದೇ ನಮಗೆ ದಾರಿದೀಪ.



– ಚೇತನ ಭಾರ್ಗವ
ಬೆಂಗಳೂರು

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055